ಶ್ರೀ ಜಗದೀಶ್ ಶೆಟ್ಟರ್ : ನಾಳೆ ಪಾಸ್ ಮಾಡೋಣ. ಶಿಕ್ಷಕರ ಬಗ್ಗೆ ಸ್ವಲ್ಪ Discussion ಆಗಬೇಕು.

ಶ್ರೀ ಟಿ,ಬಿ,ಜಯಚಂದ್ರ : ಈಗ ಎರಡನೇ ಬಿಲ್ ಆದ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ನಿರಸನದ ವಿಧೇಯಕ ತಗೆದುಕೊಳ್ಳಬಹುದು.

9. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1) **ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕ,2014**

ಅಧ್ಯಕ್ಷರು: ಆರ್ಟಿಕಲ್ 371(ಜೆ) ಬಂದಿರುವುದರಿಂದ , ಅಭಿವೃದ್ಧಿ ಮಂಡಳಿ ಬಗ್ಗೆ ಈ ಬಿಲ್ ಇದೆ.

ಪರ್ಯಾಲೋಚನ ಪ್ರಸ್ತಾವ

ಶ್ರೀ ಟಿ.ಬಿ. ಜಯಚಂದ್ರ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಎಸ್. ಆರ್.ಪಾಟೀಲ್, ಮಾನ್ಯ ಯೋಜನೆ ಮತ್ತು ಸಾಂಖಿಕ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, 2014ರ ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕವನ್ನು ಇಂದು ಬೆಳಿಗ್ಗೆ ಮಂಡನೆ ಮಾಡಲಾಗಿದೆ. ಈಗ 2014ರ ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವಿರಸನ ವಿಧೇಯಕವನ್ನು ಸಭೆಯು ಪರ್ಯಾಲೋಚಿಸಬೇಕೆಂದು ಕೋರುತ್ತಿದ್ದೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು: ಈ ವಿಧೇಯಕದ ಉದ್ದೇಶವನ್ನು ಹೇಳಿ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಇದೆ.

ಶ್ರೀ ಟಿ.ಬಿ.ಜಯಚಂದ್ರ : ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ವಿಧೇಯಕದಲ್ಲಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ್ನು repeal ಮಾಡಬೇಕೆನ್ನುವ ಮನವಿಯನ್ನು ತಂದಿದ್ದೇವೆ. ಈಗಾಗಲೇ ನಮ್ಮ ಸಂವಿಧಾನ 371 (ಜೆ) ಅನುಷ್ಠಾನಕ್ಕೆ ತಂದ ಹಳೆಯದಾಗಿರುವ ಬೋರ್ಡ್ ಹಿನ್ನಲೆಯಲ್ಲಿ ಇಟ್ಟುಕೊಳ್ಳುವ ಅವಶ್ಯಕತೆ ಬರುವುದಿಲ್ಲ. ಆ ಕಾರಣಕ್ಕೋಸ್ಕರ ಅದನ್ನು ನಿರಸನಗೊಳಿಸಬೇಕು. ಅದನ್ನೇ ಈಗ merge ಮಾಡಬೇಕು, ಅಲ್ಲಿರುವಂಥ properties ,ನ್ನು, assets ನ್ನು ಹೊಸದಾಗಿ ರಚನೆಯಾಗಿರುವ ಬೋರ್ಡ್‌ನ್ನು ವ್ಯಾಪ್ತಿಗೆ ತರಬೇಕೆನ್ನುವ ದೃಷ್ಟಿಯಿಂದ ಹಳೆಯ ಬೋರ್ಡ್‌ನ್ನು ನಿರಸನಗೊಳಿಸಬೇಕು repeal ಮಾಡಬೇಕೆಂದು ಮನವಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ನಿರಸನಗೊಳಿಸಬೇಕೆನ್ನುವ ಬಗ್ಗೆ ವಿಧೇಯಕವನ್ನು ತಂದಿದ್ದಾರೆ. ಆರ್ಟಿಕಲ್ 371 (ಜೆ) ಪ್ರಕಾರ ಸಂವಿಧಾನ ತಿದ್ದುಪಡಿ ಆದ ಮೇಲೆ ಹೊಸದಾಗಿ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿ ಎಂದು ಹೊಸದಾಗಿ ಅಸ್ತಿತ್ವಕ್ಕೆ ಬಂತು. ಅದರನ್ವಯ ಹಳೆಯ ಮಂಡಳಿಯನ್ನು ನಿರಸನಗೊಳಿಸಿ, ಅಲ್ಲಿದ್ದಂಥ ಸಿಬ್ಬಂದಿ, properties ಮತ್ತೊಂದನ್ನು ಹೊಸ ಬೋರ್ಡ್ ವ್ಯಾಪ್ತಿಗೆ ತರಬೇಕೆನ್ನುವ ಉದ್ದೇಶವಿದೆ, ಇವತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿ ಈ ಮಂಡಳಿಗಳೆಲ್ಲಾ ರಚನೆಯಾಗಿರುವುದು ಆಯಾ ಭಾಗದಲ್ಲಿ ಎಲ್ಲೆಲ್ಲಿ ಹಿಂದುಳಿದ ತಾಲ್ಲೂಕುಗಳಿದೆ, ಆ ಭಾಗದ ಸಲುವಾಗಿ ಆ ತಾಲ್ಲೂಕು ಗಳನ್ನೊಳಗೊಂಡು ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಿದ ಮೂಲ ಉದ್ದೇಶ. ಹಿಂದೆ ಕಾಂಗ್ರೆಸ್ ಸರ್ಕಾರ ಅಥವಾ ಮತ್ತೊಂದು ಸರ್ಕಾರವಿದ್ದಾಗ ಇರಬಹುದು, ಎಲ್ಲಾ ಹಂತದಲ್ಲಿ ಈ ಅಭಿವೃದ್ಧಿ ಮಂಡಳಿ ಮುಂದುವರೆದುಕೊಂಡು ಬಂದಿದೆ. ಪ್ರತಿ ಬಾರಿ ಬಜೆಟ್‌ನಲ್ಲಿ ಸಹ 25 ಕೋಟಿ, 20 ಕೋಟಿ ಈ ರೀತಿ ವಿಶೇಷ ಅನುದಾನ ಕೊಡಬೇಕೆಂದು,

ಇದು ಸಾಕಾಗಲಿಲ್ಲ ವೆಂದು ಪ್ರತಿ ಸಲ ಸದನದಲ್ಲಿ ಚರ್ಚೆಯಾಗಿದೆ. ಅನುದಾನ ಸಾಕಾಗುವುದಿಲ್ಲ ವೆಂದು ಅಭಿವೃದ್ಧಿ ಮಂಡಳಿಯ ಪ್ರತಿ ಸಭೆಗಳಲ್ಲೂ ಚರ್ಚೆಯಾಗಿದೆ. ಹೈದರಾಬಾದ್–ಕರ್ನಾಟಕದ ಅಭಿವೃದ್ಧಿ ಮಂಡಳಿಗೆ ಸಾಕಷ್ಟು ಹಣ special grant ಕೊಡುತ್ತಿರುವುದರಿಂದ ಆ ಭಾಗದಲ್ಲಿ help ಆಗಿದೆ. ಎಷ್ಟು ಅಭಿವೃದ್ಧಿ ಆಗಬೇಕಾಗಿತ್ತೋ ಅಷ್ಟರ ಮಟ್ಟಿಗೆ ಅಭಿವೃದ್ಧಿಯಾಗದಿದ್ದರೂ ತಕ್ಕಮಟ್ಟಿಗೆ help ಆಗಿದೆ. ಇಲ್ಲಿ ಒಂದು ಸಮಸ್ಯೆ ಬರುತ್ತದೆ. ಆರ್ಟಿಕಲ್ 371(ಜೆ) ಪ್ರಕಾರ ಹೊಸದಾಗಿ ಸಂವಿಧಾನ ತಿದ್ದುಪಡಿಯಾದ ಪ್ರಕಾರ ಅಭಿವೃದ್ಧಿ ಮಂಡಳಿಗೆ ವಿಶೇಷವಾದ Status ಕೊಡಬೇಕೆಂದು ಆಯಿತು, ಆದರೆ ಇದನ್ನು ರದ್ದುಮಾಡಿ ನಿರಸನಗೊಳಿಸುವ ಅವಶ್ಯಕತೆ ಇದೆಯೇ? ಈ ಮಂಡಳಿ independent ಆಗಿ ಕೆಲಸ ಮಾಡುತ್ತಿದೆ. ಅದರ ಪ್ರಕಾರ appointments, recruitments ಇದರಲ್ಲಿ reservations ಕೊಡಬೇಕೆಂದು ಪ್ರಮುಖವಾಗಿ ಇದೆ. ನಾನು ಅಂದು ಆರ್ಟಿಕಲ್ 371 (ಜೆ) ಚರ್ಚೆ ಬಂದಾಗ ಹೇಳಿದ್ದೇನೆ Appointment services, ಇತ್ಯಾದಿ ಬೇರೆ ಬೇರೆ ಎಲ್ಲಾ, status ಕೊಡುತ್ತೀರಿ, ಆದರೆ ರಾಜ್ಯ ಸರ್ಕಾರದ ಬಜೆಟ್‌ನಿಂದ ಆ ಭಾಗದ ಅಭಿವೃದ್ಧಿಗಾಗಿ, ಹೈದರಾಬಾದ್–ಕರ್ನಾಟಕದ ಅಭಿವೃದ್ಧಿಗಾಗಿ ವಿಶೇಷ ಅನುದಾನ ಏನಾದರೂ ಕೊಟ್ಟಿದ್ದೀರಾ? ನಿಮ್ಮ ಬಜೆಟ್‌ನಲ್ಲಿ ಇದಕ್ಕೆ ಏನೂ provision ಮಾಡಿಲ್ಲ. ಯಾವುದೇ provision ಮಾಡದೇ ಇದ್ದಾಗ, ಇವತ್ತೇನು ಹೈದರಾಬಾದ್– ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಅನುದಾನ ಕೊಟ್ಟಿದ್ದೀರಿ, ಅದೂ ಸಹ ಇಲ್ಲದಂತೆ ಆಗುತ್ತದೆ ಬಜೆಟ್‌ನಲ್ಲಿ ವಿಶೇಷವಾಗಿ ಏನೂ provision ಮಾಡಿಲ್ಲ. ಕೇಂದ್ರ ಸರ್ಕಾರ ಸಂವಿಧಾನ ತಿದ್ದುಪಡಿ ಆದ ಮೇಲೆ ಎಲ್ಲಾ ಜವಾಬ್ದಾರಿಯನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದೆ. ಕೇಂದ್ರ ಸರ್ಕಾರದಿಂದ ಈ ರೀತಿ ವಿಶೇಷ status ಕೊಡುವುದಕ್ಕೆ 100 ಕೋಟಿ, 1,000 ಕೋಟಿ ಕೊಡುತ್ತೇವೆನ್ನುವ ವಿಚಾರವಿರದಿದ್ದರೆ ಅದು ಬೇರೆ. ಸಂವಿಧಾನ ತಿದ್ದುಪಡಿ ಮಾಡಿ ರಾಜ್ಯ ಸರ್ಕಾರದ ಮೇಲೆ ಜವಾಬ್ದಾರಿ ಹಾಕಿದ್ದಾರೆ. ಈ ಮಂಡಳಿಗೆ ನೀವೇ ಏನಾದರೂ special grant ಕೊಡಬೇಕು ಬಜೆಟ್‌ನಲ್ಲಿ establishment, staff ಇತ್ಯಾದಿಗಾಗಿ ರೂ. 10ಕೋಟಿ ಇಟ್ಟಿದ್ದೀರಿ. ಹೀಗಾಗಿ ಇದನ್ನು ಏಕೆ

ನಿರಸನ ಮಾಡುತ್ತಿದ್ದೀರೆನ್ನುವುದು, ಅದಕ್ಕೆ ಕಾರಣವೇನು ಎಂದು ಅರ್ಥವಾಗುತ್ತಿಲ್ಲ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ independent ಆಗಿ ಕೆಲಸ ಮಾಡುತ್ತಿದ್ದು, ಅದಕ್ಕೆ ವಿಶೇಷವಾದ ಅನುದಾನ ಕೊಡುತ್ತಿದ್ದೀರಿ, ಖರ್ಚು ಮಾಡುವುದು ಎಲ್ಲಾ ಆಗುತ್ತದೆ. ಆದರೆ ಎಲ್ಲವನ್ನೂ ಅಲ್ಲಿಗೆ shift ಮಾಡುವಂಥದ್ದು, ಇದಕ್ಕೆ ನೀವು Independent ಆಗಿ status ಕೊಡಬಹುದಾಗಿತ್ತು. ಈ ಅಭಿವೃದ್ಧಿ ಮಂಡಳಿ ರಾಜ್ಯಪಾಲರ ಅಡಿಯಲ್ಲಿ ಇರುವಂಥದ್ದು. ಇತ್ತೀಚೆಗೆ ನೀವು ಖಮರುಲ್ ಇಸ್ಲಾಂ ರವರನ್ನು ಈ ಮಂಡಳಿಗೆ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಈಗ ಅದನ್ನೇ ನಿರಸನ ಮಾಡುತ್ತಿದ್ದೀರಿ, ಏಕೆ ಖಮರುಲ್ ಇಸ್ಲಾಂ ರವರನ್ನು ಅಧ್ಯಕ್ಷರನ್ನಾಗಿ ಮಾಡಿದಿರಿ? ಈ ವಿಚಾರ ನನಗೂ ಅರ್ಥವಾಗುತ್ತಿಲ್ಲ, ಈಗ ಅದೇ ಬೋರ್ಡ್‌ನ್ನು ನೀವು ನಿರಸನ ಮಾಡುತ್ತಿದ್ದೀರಿ. ಸಂವಿಧಾನದ ತಿದ್ದುಪಡಿ ಪ್ರಕಾರ ಹೈದರಾಬಾದ್ ಕರ್ನಾಟಕದ status ಕೊಟ್ಟದ್ದು ಮತ್ತು ಅದಕ್ಕೆ head ಆಗಿರುವವರು ರಾಜ್ಯಪಾಲರು, ಈ ರೀತಿಯಿರುವ ಪರಿಸ್ಥಿತಿಯೊಳಗೆ ಇದನ್ನು ನಿರಸನ ಮಾಡುವ ಆವಶ್ಯಕತೆಯೇ ಇರಲಿಲ್ಲ. ಅದಕ್ಕೆ Independent ಆಗಿ body Create ಮಾಡುತ್ತೀರಿ, ಮತ್ತೊಂದನ್ನು ಮಾಡುತ್ತೀರಿ, ರಾಜ್ಯಪಾಲರಿಗೆ ಅಧಿಕಾರ ಕೊಡುತ್ತೀರಿ, ಕೊಡಿ. ಆದರೆ ಇದನ್ನು ನಿರಸನ ಮಾಡುವ ಅವಶ್ಯಕತೆ ಇರಲಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇದರಿಂದ ಏನೂ ಪ್ರಯೋಜನವಾಗುವದಿಲ್ಲವೆಂದು ನನ್ನ ಅಭಿಪ್ರಾಯ ಇದೂಂದು set back ಆಗುತ್ತದೆ. ನಿಜವಾಗಿ ಹೇಳಬೇಕೆಂದರೆ ಇದಕ್ಕೇನು ಹಣ ಬರುತ್ತಿತ್ತು, , pecial grant ಅದು ಸಹಿತ ಬರುವುದಿಲ್ಲವೆಂದು ನನ್ನ ಅಭಿಪ್ರಾಯ. ಈ ಬಿಲ್ ತರುವ ಅವಶ್ಯಕತೆ ಇಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಸನ್ಮಾನ್ಯ ಜಗದೀಶ್‌ಶೆಟ್ಟರ್ ಅವರು ನಾವು ರಚಿಸಿದಂಥ ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ, ಅಥವಾ ಹೈದರಾಬಾದ್ ಕರ್ನಾಟಕಕ್ಕೆ ಸೀಮಿತವಾಗಿರುವಂಥ ಅಭಿವೃದ್ಧಿ ಮಂಡಳಿಗೆ ಸಂಪನ್ಮೂಲ ಸಾಕಾಗುವುದಿಲ್ಲವೆಂದು ಈ ಬೇಡಿಕೆ ಎಲ್ಲಾ ಸಂದರ್ಭದಲ್ಲೂ ಸಹ ಇತ್ತು,

ಆದರೆ ಇಲ್ಲಿ ವಿಶೇಷವಾಗಿ ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ವರ್ಷಕ್ಕೆ ಎಷ್ಟು ಕೊಡುತ್ತಿದ್ದೇವೆಂದರೆ ರೂ 65ಕೋಟಿ ಈ ಮೊತ್ತ ಈಗಾಗಲೇ 30 ಕೋಟಿ, 35 ಕೋಟಿ, ರೂ. ಆಗಿದೆ. ಅದೇ ಹೆಸರನಲ್ಲಿ ಸಂವಿಧಾನವನ್ನು ಬದಲಾವಣೆ ಮಾಡಿ ತಂದಿರುವ ಕಾನೂನನ್ನು ಅದೇ ಬೋರ್ಡ್‌ನ್ನು ನಿರಸನ ಮಾಡಿರುವುದು. ಹಾಗಾಗಿ ಎಲ್ಲೋ ಒಂದು ಕಡೆ ಅದಕ್ಕೂ,ಇದಕ್ಕೂ duplication ಆಗಬಾರದು. ಸಂವಿಧಾನದಡಿಯಲ್ಲಿ ಬದಲಾವಣೆ ತಂದಿರುವ ಬೋರ್ಡಿಗೆ ಹೆಚ್ಚಿನ ಅಧಿಕಾರ ಇರುತ್ತದೆ. ಹೆಚ್ಚಿಗೆ ವ್ಯಾಪಕವಾಗಿ ಚರ್ಚೆ ಮಾಡಲು ಅಧಿಕಾರವಿರುತ್ತದೆ.

ಅಧ್ಯಕ್ಷರು : ಇದಕ್ಕೆ ರಾಜ್ಯ ಸರ್ಕಾರದಿಂದ share ಇರುತ್ತದೆ ಏನು?

ಶ್ರೀ ಟಿ.ಬಿ.ಜಯಚಂದ್ರ : ಹೌದು, ರಾಜ್ಯ ಸರ್ಕಾರದ share ಇರುತ್ತದೆ. ಕೇಂದ್ರ ಸರ್ಕಾರದ ಹಣವನ್ನು ಪಡೆಯುವುದಕ್ಕೆ ಕೂಡಾ ಪ್ರಯತ್ನ ಮಾಡಬೇಕಾಗುತ್ತದೆ. ಎಷ್ಟು ಹಣ ಎಂಬ ಬಗ್ಗೆ ನಾಳಿನ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಿರ್ಧಾರ ಮಾಡಿ ಹೇಳುವವರಿದ್ದಾರೆ. ಬಹುಶ 4–5 ಪಟ್ಟಿನಷ್ಟು ಹಣ ಬರುವಂತಹ ನಿರೀಕ್ಷೆ ಇರುವಾಗ ಈ ಬೋರ್ಡ್‌ನ್ನು ಇಟ್ಟುಕೊಳ್ಳುವ ಅವಶ್ಯಕತೆ ಬರುವುದಿಲ್ಲ. ಅದಕ್ಕಾಗಿ ಇದನ್ನು ನಿರಸನ ಗೊಳಿಸಬೇಕೆಂಬ ತೀರ್ಮಾನ ಮಾಡಿದ್ದೇವೆ. ಹಾಗಾಗಿ ಆ ಪ್ರದೇಶಕ್ಕೆ ಬರುವ ಹಣದಲ್ಲಿ ಕಡಿಮೆಯಾಗುತ್ತಿದೆ ಅಥವಾ ಇನ್ನೊಂದು ರೀತಿಯ ತೊಂದರೆಯಾಗುತ್ತದೆ ಎಂಬ ಆತಂಕ ವ್ಯಕ್ತಪಡಿಸಿದ್ದೀರಿ, ಆ ರೀತಿಯಾಗುವುದಿಲ್ಲ. ಸಂವಿಧಾನವನ್ನು ಬದಲಾವಣೆ ಮಾಡಿ ತಂದಿರುವ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಅಭಿವೃದ್ಧಿ ಮಂಡಳಿಗೆ ಸಭೆಯನ್ನು ರಚಿಸುವಂತಹುದು ಇದೆ. ಆ ಪ್ರದೇಶಗಳ ಅಭಿವೃದ್ಧಿಗೆ ಸಮನಾಗಿ ರಾಜ್ಯದ ಅನುದಾನ ಹಂಚಿಕೆ ಮಾಡುವುದನ್ನು ಇದರಲ್ಲಿ ಅಳವಡಿಸಿದೆ. ಸಾರ್ವಜನಿಕವಾಗಿ ಉದ್ಯೋಗಗಳನ್ನು ಸ್ಥಳೀಯರಿಗೆ ವ್ಯಂದ ಮೀಸಲಾತಿಯನ್ನು ಒದಗಿಸುವುದು. ಅದೇ ರೀತಿ ಸ್ಥಳೀಯರಿಗೆ ಶಿಕ್ಷಣ ಮತ್ತು ವೃತ್ತಿಪರ ತರಬೇತಿ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಕಲ್ಪಿಸುವುದು. ಇದೆಲ್ಲವೂ ವ್ಯಾಪಕವಾಗಿ ಅಡಕವಾಗಿರುವುದರಿಂದ ಹಳೆಯ ಬೋರ್ಡ್ ಇಟ್ಟುಕೊಂಡು ಅರ್ಥವಿಲ್ಲ ಎಂಬ ಕಾರಣಕ್ಕೆ ನಿರಸನ ಮಾಡಬೇಕೆಂದು

ತೀರ್ಮಾನಿಸಿದ್ದೇವೆ. ನಿರಸನ ಎಂದರೆ ಹಳೆಯ ಬೋರ್ಡಿನಲ್ಲಿ grants, assets ಏನಿದೆ, ಎಲ್ಲವೂ ವರ್ಗಾವಣೆಯಾಗುತ್ತದೆ. ಅಭಿವೃದ್ಧಿಗೆ ಯಾವುದೇ ರೀತಿಯಲ್ಲಿ ಮಾರಕವಾಗುವುದಿಲ್ಲ.

ವಿಶ್ವೇಶ್ವರ ಹೆಗಡೆ ಕಾಗೇರಿ :(ಸಿರ್ಸಿ) ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಮ್ಮ ನಾಯಕರು ಈಗಾಗಲೇ ಈ ವಿಷಯದ ಕುರಿತು ಮಾತನಾಡಿದ್ದಾರೆ. ನನ್ನ ಒಂದೇ ಒಂದು ಕಾಳಜಿಯೆಂದರೆ ಶಾಸಕರ ಶಿಫಾರಸ್ಸಿನಂತೆ ಈ ಅಭಿವೃದ್ಧಿ ಮಂಡಳಿಯಲ್ಲಿ ಕೆಲಸಕಾರ್ಯ ನಡೆಯುತ್ತಿತ್ತು. ಶಾಸಕರಿಗೆ ಅವರ ಕ್ಷೇತ್ರಗಳಲ್ಲಿ ಯಾವ್ಯಾವ ರೀತಿಯ ಸಮಸ್ಯೆಗಳಿವೆ, ಅವುಗಳಿಗೆ ಜನ ಪ್ರತಿನಿಧಿಗಳು ಹೇಗೆ ಸ್ಪಂದಿಸಬೇಕೆಂಬ ನೇರವಾದ ಒಡನಾಟ, ಸಂಪರ್ಕ ಇತ್ತು. ಆದರೆ 371 (J) amendment ಆದ ನಂತರ ಜಾರಿಗೊಳ್ಳುತ್ತಿರುವ ಸಂದರ್ಭದಲ್ಲಿ ಈ ಅಭಿವೃದ್ಧಿ ವಿಷಯಗಳೆಲ್ಲವೂ ರಾಜ್ಯಪಾಲರ ಅಧಿಕಾರದಡಿಯಲ್ಲಿ ಹೋಗುತ್ತದೆ. ಜನಪ್ರತಿನಿಧಿಗಳಿಗಾಗಲಿ, ಶಾಸಕರಿಗಾಗಲಿ, ಯಾವುದೇ ರೀತಿಯ ಸ್ಪಂದನೆ ಇರುವುದಿಲ್ಲ. ರಾಜ್ಯಪಾಲರು ನಿರ್ಧಾರ ಮಾಡುತ್ತಾರೆ. ಸರ್ಕಾರ ನೀವು ಏನು ಹಣ ಇದೆ ಎಂದು ಹೇಳುತ್ತೀರಿ, ಅದು ರಾಜ್ಯಪಾಲರ ಶಿಫಾರಸ್ಸಿನಂತೆ ಮುನ್ನಡೆಯುತ್ತದೆ. ಇದರಲ್ಲಿ ಶಾಸಕರ ಪಾತ್ರವನ್ನು ಎಲ್ಲೋ ಒಂದು ಕಡೆ ಅಭಿವೃದ್ಧಿ ಕೆಲಸದಿಂದ ದೂರ ಮಾಡಿದಂತಾಗುತ್ತದೆ. ಈಗಾಗಲೇ ನಮ್ಮ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಹೇಳಿದಂತೆ, ತಾವು ಈ ಬೋರ್ಡ್‌ನ್ನು ಪ್ರತ್ಯೇಕವಾಗಿ ಇಡಿ. ಇದರಿಂದ ಅಭಿವೃದ್ಧಿಗೆ ಅನುಕೂಲ, ಅಭಿವೃದ್ಧಿಗೇನು ತೊಂದರೆಯಾಗುತ್ತದೆ? 371(J) ಪ್ರಕಾರ ಏನೇನು ಅಭಿವೃದ್ಧಿ ಆಗುತ್ತದೆಯೋ ಆಗುತ್ತದೆ. 371(J) ಬೇಕೆಂದು ಏನು ಹೋರಾಟ ಮಾಡಿದೆವು. ಅದಕ್ಕೆ ಜಯ ಸಿಕ್ಕಿದೆ, ಒಳ್ಳೆಯದಾಗಿದೆ. ಅದರ ಜೊತೆಗೆ ಇದನ್ನು ನಿರ್ಲಕ್ಷ್ಯ ಮಾಡಿರುವುದರಿಂದ ಜನಪ್ರತಿನಿಧಿಗಳ ಸಕ್ರಿಯವಾದ ಪಾಲ್ಗೊಳ್ಳುವಿಕೆಯಿಂದ ದೂರ ಇಟ್ಟಂತೆ ಎಲ್ಲೋ ಒಂದು ಕಡೆ ಆಗುತ್ತದೆ. ಹಾಗಾಗದಿರುವಂತೆ ಈ ಬೋರ್ಡಿನ ಅಸ್ತಿತ್ವ ಇಟ್ಟುಕೊಳ್ಳುವುದರಲ್ಲಿ ಯಾವುದೂ ತೊಂದರೆ ಇಲ್ಲ ಎನ್ನುವುದು ನನ್ನ ಅಭಿಪ್ರಾಯ. ಎರಡನೆಯದಾಗಿ, ನಮ್ಮ ಸರ್ಕಾರದ ಧೋರಣೆಯಿಂದ ಎಲ್ಲಾ

ಬೋರ್ಡ್‌ಗಳು ಸ್ವಲ್ಪ ಆಯಾ ಧ್ಯೇಯೋದ್ದೇಶವನ್ನು ಈಡೇರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಲೆನಾಡು ಅಭಿವೃದ್ಧಿ ಮಂಡಳಿ ಇದೆ, ಬಯಲು ಸೀಮೆ ಅಭಿವೃದ್ಧಿ ಮಂಡಳಿ ಇದೆ, ನಾವು ಇನ್ನೂ ಹೆಚ್ಚಿನ ಅನುದಾನವನ್ನು ಕೊಡಬೇಕು. ನಾವೆಲ್ಲರೂ ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಬರುವವರು. ನಮಗೆ 30–35 ಕೋಟಿ ರೂ. ಸಹ ಬರುವುದಿಲ್ಲ. 72 ವಿಧಾನಸಭಾ ಕ್ಷೇತ್ರ ಇದೆ. 72 ಕ್ಷೇತ್ರಗಳಲ್ಲಿ 30–35 ಕೋಟಿ ರೂ ಸಹ ಇಲ್ಲದಂತಾದರೆ ಒಂದೊಂದು ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ 25–30ಲಕ್ಷ ರೂ. ಸಹ ಸಿಗುವುದಿಲ್ಲ. ನಾವು ಮಲೆನಾಡು ಪ್ರದೇಶ ಅಭಿವೃದ್ಧಿ ಆಗಲಿ, ಬಯಲು ಸೀಮೆ ಅಭಿವೃದ್ಧಿ ಆಗಲಿ, ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಆಗಲಿ ಎಂಬ ಒಳ್ಳೆಯ ಉದ್ದೇಶದಿಂದ ಮಂಡಳಿಗಳನ್ನು ಮಾಡಿದೆವು. ಆದರೆ, ಮಂಡಳಿಗಳಿಗೆ ಹಣವನ್ನು ಕೊಡದೆ, ಆ ಭಾಗದ ಅಭಿವೃದ್ಧಿಯಾಗದೆ, ಮಂಡಳಿಗಳ ಬಗ್ಗೆ ಒಂದು ಸದಭಿಪ್ರಾಯ ನಿರ್ಮಾಣವಾಗದೆ ಇರುವಂತಹುದಿದೆ. ಆಡಳಿತಾತ್ಮಕ ಖರ್ಚಿಗೆ ಮಾತ್ರ ಇದು ಸೀಮಿತವಾಗಿದೆ, ಅಧಿಕಾರಿಗಳನ್ನು ನೇಮಕ ಮಾಡುವುದಕ್ಕಷ್ಟೇ ಸೀಮಿತವಾಗಿದೆ ಎಂಬ ಭಾವನೆ ಬರುವಂತಾಗಿದೆ. ಹಾಗಾಗಿ ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ಉಳಿದ ಮಂಡಳಿಗಳನ್ನೂ ಸಹ ಶಕ್ತಿಶಾಲಿ ಮಾಡಬೇಕು. ಹೆಚ್ಚಿನ ಹಣಕಾಸಿನ ನೆರವು ಕೊಡಬೇಕು. ಇಲ್ಲದಿದ್ದರೆ ಆ ಭಾಗದಲ್ಲಿ ಇನ್ನೊಂದು ರೀತಿಯ ಧ್ವನಿ ಬರಲು ಪ್ರಾರಂಭವಾಗುತ್ತದೆ. ಇನ್ನೂ ಬೇರೆ ರೀತಿಯ ಹೋರಾಟಗಳನ್ನು ಚಟುವಟಿಕೆಗಳನ್ನು ಮಾಡಿ ಅಲ್ಲಿ ಏನು ನಿರ್ಲಕ್ಷ್ಯವಾಗಿದೆ, ಅದರ ಬಗ್ಗೆ ಧ್ವನಿ ಎತ್ತುವ ಸಂದರ್ಭ ಬರುತ್ತದೆ. ಮಲೆನಾಡು ಪ್ರದೇಶದಲ್ಲಿ ಏಕೆ ನಕ್ಸಲ್ ಚಟುವಟಿಕೆಗಳ ಬೆಳವಣಿಗೆಯಾಗುತ್ತಿದೆ? ಸರ್ಕಾರದಲ್ಲಿ ಎಲ್ಲಾ ರೀತಿಯ ವರದಿಗಳಿವೆ, ಮಲೆನಾಡು ಭಾಗದಲ್ಲಿ ಬೇಕಾದ ನಾಗರಿಕ ಸೌಲಭ್ಯಗಳನ್ನು ಕೊಡಲಾಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ನಾನು ಹೇಳುವುದಾದರೆ, 6–6 ತಿಂಗಳು ಮಳೆಗಾಲದ ಸಂದರ್ಭದಲ್ಲಿ ಒಬ್ಬ ರೋಗಿಯನ್ನು ವಾಹನದಲ್ಲಿ ಕರೆದುಕೊಂಡು ಬರುವುದಕ್ಕಾಗುವುದಿಲ್ಲ. ಇಲ್ಲಿಗೆ ರೂ 2 ಕೋಟಿ, 3 ಕೋಟಿ ಬಜೆಟ್, ಆರ್.ಆರ್,ಡಿ.ಪಿ.ಆರ್. ನಲ್ಲಿ ಕೇಳಿದರೆ ದುಡ್ಡಿಲ್ಲ. ಹಾಗಾಗಿ ನಮ್ಮ

ಸಮಸ್ಯೆಗಳು ಹಾಗೆ ಉಳಿದಿವೆ. ಹಾಗಾಗಿ ಈ ಅಭಿವೃದ್ಧಿ ಮಂಡಳಿಗಳಿಗೂ ಸಹ ಶಕ್ತಿ ಕೊಡದಿದ್ದರೆ ಕೇವಲ ಅಭಿವೃದ್ಧಿ ಮಂಡಳಿಗಳೆಂದು ಹೇಳಿಕೊಳ್ಳುತ್ತೇವೆ. ಆದರೆ ಕೆಲಸ ಮಾತ್ರ ಯಾವುದೂ ಆಗುವುದಿಲ್ಲ. ಈ ಸ್ಥಿತಿ ಬರುತ್ತದೆಂದು ಹೇಳುತ್ತೇನೆ. ಮತ್ತೊಮ್ಮೆ ಹೇಳುತ್ತೇನೆ, ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿ ಏನಿದೆ, ಇದನ್ನು ಅಸ್ತಿತ್ವದಲ್ಲಿ ಇಟ್ಟುಕೊಳ್ಳುವುದು ಆ ಭಾಗದ ಅಭಿವೃದ್ಧಿ ದೃಷ್ಟಿಯಿಂದ, ಜನ ಪ್ರತಿನಿಧಿಗಳನ್ನು ಹೆಚ್ಚಾಗಿ ಭಾಗವಹಿಸುವಂತೆ ಮಾಡುವ ದೃಷ್ಟಿಯಿಂದ ಅಗತ್ಯ ಇದೆ ಎಂಬ ನನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತೇನೆ.

ಶ್ರೀ ಉಮೇಶ್ ವಿ,ಕತ್ತಿ (ಹುಕ್ಕೇರಿ) : ಮಾನ್ಯ ಅಧ್ಯಕ್ಷರೆ, Article 371(J) ಬಂದ ಮೇಲೆ ನಮ್ಮ ಪಕ್ಕದ ರಾಜ್ಯವಾದ ಮಹಾರಾಷ್ಟ್ರದ ವಿದರ್ಭ ಭಾಗದಲ್ಲಿ ಪೂರ್ಣ ಅಧಿಕಾರ ರಾಜ್ಯಪಾಲರದಾಗಿದೆ. ಯಾವುದೇ ರೀತಿ ಮಂಡಳಿಗಳನ್ನು merge ಮಾಡಿ ನಿಮ್ಮದೇನಾದರೂ ನಡೆಯುತ್ತದೆಂದರೆ ನಿಮ್ಮ ಅಧಿಕಾರ ನಡೆಯುವುದಿಲ್ಲ. 100% power Governor ದ್ದಾಗಿರುತ್ತದೆ. ಆ ಕಾರಣ ಇದನ್ನು merge ಮಾಡುವುದು ಒಂದನೆಯದು.ಎರಡನೆಯದಾಗಿ, ಆ ಭಾಗದ ಶಾಸಕರಿಗೆ ಹಿಂದಿನ ಅಭಿವೃದ್ಧಿ ಅನುದಾನ ಏನಿದೆ, ಅದು ಕುಂಠಿತವಾಗುತ್ತದೆ.

ಅಧ್ಯಕ್ಷರು : ಅದೂ ಬಿಲ್ ಬರುತ್ತದೆಯಲ್ಲ .

ಶ್ರೀ ಉಮೇಶ್ ವಿ.ಕತ್ತಿ : ಇಲ್ಲ ನಾನು ಆಭಾಗದ ಶಾಸಕರಲ್ಲಿ ವಿನಂತಿ ಮಾಡುತ್ತೇನೆ. ನೀವು ಹೋಗಿ ಮಹಾರಾಷ್ಟ್ರದ ವಿದರ್ಭದಲ್ಲಿ ಹೋಗಿ ನೋಡಬಹುದು. 100% ರಾಜ್ಯಪಾಲರ ಅಧಿಕಾರ ವ್ಯಾಪ್ತಿಯಲ್ಲಿ 371(J) Act implement ಆಗುತ್ತದೆ, ರಾಜ್ಯ ಸರ್ಕಾರದ ಯಾವುದೇ permission ಬೇಕಿಲ್ಲ. ರಾಜ್ಯಪಾಲರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮ. ಅದನ್ನು implement ಮಾಡುವಂತಹದು, ರಾಜ್ಯಪಾಲರಿಗೆ 100% ಅಧಿಕಾರ ಹೊರತು ಅಭಿವೃದ್ಧಿ ಮಂಡಳಿಯ ಕೆಲಸ ಇರುವುದಿಲ್ಲ. ಆದುದರಿಂದ ಇರುವ ಮಂಡಳಿಯನ್ನು ಮುಂದುವರೆಸಬೇಕು. ಯಾವುದನ್ನು

ನಿರಸನಗೊಳಿಸಬಾರದು. ಅಲ್ಲಿರುವ ಶಾಸಕರಿಗೆ ಹೈದರಾಬಾದ್–ಕರ್ನಾಟಕ ಭಾಗವನ್ನು ಅಭಿವೃದ್ಧಿ ಪಡಿಸಲು ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ಆ ಮಂಡಳಿಯನ್ನು ಮುಂದುವರೆಸಿ, ಈ 371(J) ಸ್ವಾಗತ ಮಾಡಿ, ರಾಜ್ಯಪಾಲರ ಮುಖೇನ ಆ ಭಾಗದ ಅಭಿವೃದ್ಧಿಯಾಗಬೇಕೆಂದು ನಮ್ಮೆಲ್ಲರ ಬಯಕೆ, ಆ ದೃಷ್ಟಿಯಿಂದ ಸರ್ಕಾರ ಯಾವುದೇ ರೀತಿ ಅದನ್ನು merge ಮಾಡಬಾರದು ಎಂದು ವಿನಂತಿ ಮಾಡುತ್ತೇನೆ.

ಶ್ರೀ ಬಿ.ಬಿ.ನಿಂಗಯ್ಯ(ಮೂಡಿಗೆರೆ): ಮಾನ್ಯ ಅಧ್ಯಕ್ಷರೆ, ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ನಿರಸನ ವಿಧೇಯಕ 2014 ಇದು ತಂದಿರುವುದು ಸರಿಯಾದರೂ ಕೂಡಾ Article 371(J) ಅಡಿಯಲ್ಲಿ ಇದು duplication ಆಗಬಾರದೆಂಬ ಉದ್ದೇಶ ಇರುವುದು ಸರಿಯೆ. ಆದರೆ, ನಮ್ಮ ಸ್ನೇಹಿತರಾದ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡಿದ ಹಾಗೆ ಹೈದರಾಬಾದ್–ಕರ್ನಾಟಕ ಮೊದಲು ಅಬಿವೃದ್ಧಿ ಮಂಡಳಿ ಎಂದು ಇತ್ತು, ಬಯಲು ಸೀಮೆ ಅಭಿವೃದ್ಧಿ ಮಂಡಳಿ ಎಂದಿತ್ತು, ಮಲೆನಾಡು ಅಭಿವೃದ್ಧಿ ಮಂಡಳಿ ಎಂದಿತ್ತು. ತಮಗೆಗೊತ್ತಿರುತ್ತದೆ. ಆ ಭಾಗಕ್ಕೆ ತಮ್ಮ ಕಾಲದಲ್ಲಿ ಆದದ್ದು ಅದು. ಇವತ್ತು ಮಲೆನಾಡು ಅಭಿವೃದ್ಧಿ ಮಂಡಳಿ ಇದ್ದೂ ಇಲ್ಲದಂತಾಗಿದೆ. ಆ ದೃಷ್ಟಿಯಿಂದ ಇಂದು 72 Constituency ಗಳಿಗೆ 34 ಕೋಟಿ ಕೊಟ್ಟರೆ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತಾಗುತ್ತದೆ. ಆ ದೃಷ್ಟಿಯಿಂದ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಹಾಕುವಂತಹುದು ಆಗುತ್ತಿದೆ. ಇಡೀ ಮಲೆನಾಡು ಪ್ರದೇಶದ ಅಭಿವೃದ್ಧಿಗೆ ಒಂದೊಂದು Constituency ಬೆಂಗಳೂರಿನ 28 Constituency ಸಮನಾಗಿ ಶೃಂಗೇರಿ ಇದೆ, ಕಾರವಾರ ಜಿಲ್ಲೆ ಇದೆ. ಕೊಡಗು, ಮೂಡಿಗೆರೆ, ಚಿಕ್ಕಮಗಳೂರು ಇದೆ. ಈ ಪ್ರದೇಶಗಳಿಗೆ ನೀವು ಕೊಡುವ ಅನುದಾನ ಏನೇನು ಸಾಲುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಮೂಡಿಗೆರೆ ವಿಧಾನಸಭಾ ಕ್ಷೇತ್ರ 1,073 ಹಳ್ಳಿಗಳನ್ನು ಒಳಗೊಂಡಿವೆ, 50 ಗ್ರಾಮ ಪಂಚಾಯಿತಿ ವ್ಯಾಪ್ತಿ ಬರುತ್ತದೆ. ನೀವು ಕೊಡುವ ಅನುದಾನದಲ್ಲಿ ನಮಗೆ ಏನೂ ಮಾಡಲಾಗುತ್ತಿಲ್ಲ. ಆ ದೃಷ್ಟಿಯಿಂದ ಈ ಪ್ರದೇಶಗಳ ಅಭಿವೃದ್ಧಿಗೆ

ವಿಶೇಷವಾಗಿ ಗಮನ ಹರಿಸಬೇಕು. ಕಳೆದ ಬಾರಿ ಬಂದ ಮಳೆ 13 ವರ್ಷದ ನಂತರ ಬಂದಿರುವುದು ದಾಖಲೆ ಮಳೆ, ಎಲ್ಲಾ ರಸ್ತೆಗಳು ಹಾಳಾಗಿವೆ, ಭೂ ಕುಸಿತ ಉಂಟಾಗಿದೆ. ಅಲ್ಲಿ ನೀವು ಒಬ್ಬ ಎಂ.ಎಲ್.ಎ. ಗೆ 34 ಲಕ್ಷ ರೂ. ಕೊಟ್ಟರೆ ನಾವು ಏನು ಮಾಡಬಹುದು? ಈ ಬಾರಿ ನಮ್ಮ ಭಾಗದ ಅಭಿವೃದ್ಧಿಗೆ ಏನೇನೂ ಹಣ ಸಿಕ್ಕಿಲ್ಲ. Article 371 (J) ಅಡಿಯಲ್ಲಿ ಭಾಗಕ್ಕೆ ವಿಶೇಷ ಸ್ಥಾನಮಾನವನ್ನು ಕೊಟ್ಟಿರುವುದನ್ನು ಸ್ವಾಗತ ಮಾಡಿದರೂ ಕೂಡಾ ಈ ಮಂಡಳಿಗೆ ಹೆಚ್ಚು ಹಣವನ್ನು ಕೊಡುವ ಮೂಲಕ ಆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಮುಂದಾಗಬೇಕು. ಆ ಭಾಗದ ಜನರನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ. ಇದು ಇಡೀ ಮಲೆನಾಡಿನ ಜನರಿಗೆ ಅರ್ಥವಾಗುತ್ತಿದೆ ಅದಕ್ಕಾಗಿ ಮತ್ತೊಮ್ಮೆ ನಾವು ಹೋರಾಟ ಮಾಡುವ ಅನಿವಾರ್ಯ ಸಂದರ್ಭವನ್ನು ಸರ್ಕಾರ ಸೃಷ್ಟಿ ಮಾಡುವುದು ಬೇಡ, ವಿಶೇಷ ಸ್ಥಾನಮಾನ ಕೊಟ್ಟಿರುವ ಹಾಗೆ ಮಲೆನಾಡಿಗೆ ವಿಶೇಷ ಒತ್ತನ್ನು ಕೊಟ್ಟು ಮುಂದಿನ ಬಜೆಟ್‌ನಲ್ಲಿ ಅಭಿವೃದ್ಧಿಗೆ ಹಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ,

ಕೆ.ಜಿ. ಬೋಪಯ್ಯ (ವಿರಾಜಪೇಟೆ) :– ಮಾನ್ಯ ಅಧ್ಯಕ್ಷರು, ತಾವು ಹೊಸದಾಗಿ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಬೋರ್ಡ್ ಮಾಡಿದ್ದೀರಿ. ಈಗ ಈ ಬಿಲ್ ತಂದಿದ್ದೀರಿ. ಹೊಸ ಬೋರ್ಡ್‌ಲ್ಲಿ ಸನ್ಮಾನ್ಯ ಸಚಿವರು ಕೆಲವರು ಅಧಿಕಾರಿಗಳು ಮಾತ್ರ ಸದಸ್ಯರಾಗಿದ್ದಾರೆ. ಆದರೆ ಹಿಂದೆ ಇದ್ದಂತಹ ಮಂಡಳಿಯಲ್ಲಿ ಆ ಭಾಗದಲ್ಲಿ ಬರುವಂತಹ ಎಲ್ಲಾ ಸದಸ್ಯರಿದ್ದರು. ಅವರ ಅಭಿಪ್ರಾಯಗಳನ್ನು ಹೇಳಲಿಕ್ಕಾದರೂ ಅದರಲ್ಲಿ ಅವಕಾಶವಿದೆ. ಹೊಸದಾಗಿ ರಚನೆಯಾದಂತಹ ಬೋರ್ಡ್‌ಲ್ಲಿ ನಮ್ಮ ಸದಸ್ಯರು ಎಲ್ಲಿದ್ದಾರೆ ಅದನ್ನು ಸ್ವಲ್ಪ clarify ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ, ಬಹುಶ ಅವರ rights ಇಲ್ಲದಂತಾಗಬಹುದು ಎನ್ನುವುದು ನನ್ನ ಭಾವನೆಯಾಗಿದೆ.

ಅಧ್ಯಕ್ಷರು :– ಆಯಿತು, ಮಂತ್ರಿಗಳು ಅದರ ಬಗ್ಗೆ ಹೇಳಿ.

ಶ್ರೀ ಕೆ.ಜಿ.ಬೋಪಯ್ಯ :– ಹೊಸದಾಗಿ ರಚನೆಯಾಗಿರುವ ಮಂಡಳಿಗೆ ಏನೇನೂ ಅಧಿಕಾರವಿಲ್ಲ. ಮಾನ್ಯ ರಾಜ್ಯಪಾಲರಿಗೂ ಈ ಮಂಡಳಿಗೂ ಏನು ಸಂಬಂಧ? ಈ ಎಲ್ಲವನ್ನೂ ಸಹಿತ ಸ್ವಲ್ಪ explain ಮಾಡಿ.

ಶ್ರೀ ಪಿ.ಟಿ.ರವಿ (ಚಿಕ್ಕಮಂಗಳೂರು) :– ಮಾನ್ಯ ಅಧ್ಯಕ್ಷರೆ, ನನ್ನ ಮಾತನ್ನೂ ಕೇಳಿ ನಂತರ ಎಲ್ಲದಕ್ಕೂ ಮಾನ್ಯ ಮಂತ್ರಿಗಳು ಸೇರಿಸಿಕೊಂಡು ಒಟ್ಟಾಗಿ clarification ಕೊಡಲಿ, ಈ ಬೋರ್ಡ್‌ಗೆ ಆನುದಾನವನ್ನು ಕೊಡುವುದನ್ನು ಶಾಸನಬದ್ಧ ಗೊಳಿಸುವುದಕ್ಕೆ ಏನಾದರೂ ಯೋಜನೆ ಮಾಡುತ್ತಾರಾ? ಈಗ ಹೆಸರು ಬದಲಾಯಿಸಿ, ಸ್ವರೂಪ change ಮಾಡಿದ ತಕ್ಷಣವೇ ಅಭಿವೃದ್ಧಿಯಾಗುತ್ತದೆ ಎಂದೇನೂ ಇಲ್ಲ. ಆ ಭಾಗಕ್ಕೆ ಏನಾದರೂ ಇಷ್ಟು percentage ಅನುದಾನ ಕೊಡುತ್ತೇವೆ, ಎನ್ನುವುದನ್ನು ನಿರ್ದಿಷ್ಟಗೊಳಿಸಿದ್ದರೆ, ಅದು ಅಭಿವೃದ್ಧಿ ಯಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. "ಮೂಗಿಗಿಂತ ಮೂಗುತಿ ಭಾರ" ಎನ್ನುವ ರೀತಿಯಲ್ಲೇ ನಮ್ಮ ಅಭಿವೃದ್ಧಿ ಮಂಡಳಿಗಳಿವೆ, ಅವು ಬಿಳಿಯಾನೆ ಗಳಾಗಿವೆ. ಬಿಳಿಯಾನೆಗಳನ್ನು ಸಾಕುವುದಕ್ಕೋಸ್ಕರ ಅಭಿವೃದ್ಧಿ ಮಂಡಳಿಗಳನ್ನು ರಚನೆ ಮಾಡುವಂತಹ ಕೆಲಸವಾಗಿದೆ ಅಥವಾ ಯಾರಿಗೆ influence ಇರುವುದಿಲ್ಲವೋ, ಯಾರ ಮೇಲೆ ರಾಜಕೀಯವಾಗಿ ಸೇಡು ತೀರಿಸಿಕೊಳ್ಳ ಬೇಕಾಗಿರುತ್ತದೆಯೋ, ಅವರನ್ನು ತೆಗೆದು ಆ ಮಂಡಳಿಗೆ ಹಾಕಿ, ಮೂಲೆಗುಂಪು ಮಾಡುವುದಕ್ಕೂ ಇವು ಬಳಕೆಯಾಗುತ್ತಿವೆ. ಹಾಗಾಗಬಾರದು ಎಂದರೆ, ನಿರ್ದಿಷ್ಟ ಅನುದಾನ ಕೊಡುವಂತೆ ಮಾಡುವ ಕೆಲಸವಾಗಬೇಕು. ಆ ರೀತಿ ಏನಾದರೂ ಯೋಜನೆ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ. ಟಿ.ಬಿ.ಜಯಚಂದ್ರ (ಕಾನೂನು,ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರು) :– ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಬಹಳಷ್ಟು ಜನ ಸದಸ್ಯರು ಮಾತನಾಡಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಿಜ, ನಾನು ಒಪ್ಪುತ್ತೇನೆ. ಮಾನ್ಯ ಕಾಗೇರಿಯವರು, ಶಾಸನಬದ್ದವಾಗಿ ಇರತಕ್ಕಂಥ ಅಧಿಕಾರವನ್ನು ಕೊಡಬೇಕು, ಹೆಚ್ಚಿನ ಸಂಪನ್ಮೂಲವನ್ನು ಕೊಡದಿದ್ದರೆ ಕಷ್ಟವಾಗುತ್ತದೆ

ಎನ್ನುವಂತಹ ಒಂದು ಮಾತನ್ನು ಹೇಳಿದರು. ಆಯಾ ಪ್ರದೇಶಗಳಿಗೆ ಯಾವ ಉದ್ದೇಶಕ್ಕೋಸ್ಕರ ಈ ಬೋರ್ಡ್‌ಗಳನ್ನು ನಾವು ಮಾಡಿರುತ್ತೇವೋ, ಆ ಉದ್ದೇಶಗಳು ಸಾಧನೆಯಾಗಬೇಕಾದಾಗ ಹೆಚ್ಚಿನಹಣ ಕೊಟ್ಟಾಗ ಮಾತ್ರ ಸಾಧನೆಯಾಗುತ್ತದೆ. ಇಲ್ಲದಿದ್ದರೆ, ಆಗುವುದು ಕಷ್ಟವಾಗುತ್ತದೆ, ಮಲೆನಾಡು ಅಭಿವೃದ್ಧಿ ಮಂಡಳಿಯ ನಿಮ್ಮ ಅನುಭವ ಅದು. ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ನಾನು ಸದಸ್ಯನಾಗಿರುವ ಸಂದರ್ಭದಲ್ಲಿ ನಮಗೆ 5 ಲಕ್ಷ. ಗಳು ಮಾತ್ರವೇ ಸಿಗುತ್ತಿತ್ತು. ನಿಜ, ನಾನು ಒಪ್ಪುತ್ತೇನೆ, ಅದಕ್ಕೆ ಹೆಚ್ಚು ಶಕ್ತಿಯನ್ನು ಕೊಡಬೇಕು. ಅದರೂ ಆಲಾಯಿದಾ ಮಾತು. ಈಗ ನಾವು ಏಕೆ ಈ ಬೋರ್ಡ್ ಅನ್ನು ನಿರಸನ ಮಾಡಲಿಕ್ಕೆ ಹೊರಟಿದ್ದೇವೆ ಎಂದರೆ, ಈಗಾಗಲೇ ' The Hyderabad - Karnataka Region Development Board ಎಂಬ ಶಾಸನಬದ್ಧವಾಗಿರತಕ್ಕ ಸಂವಿಧಾನದ ಇಚ್ಛೆಯಂತೆ ಬದಲಾವಣೆಯಾದ ಬೋರ್ಡ್‌ಅನ್ನು ರಚನೆ ಮಾಡಲಾಗಿದೆ. ಈ ಬೋರ್ಡ್‌ನಲ್ಲಿ Advisory Council ಕೂಡ ಇರುತ್ತದೆ. ಶಾಸಕರು ಯಾರೂ ಇರುವುದಿಲ್ಲ, ಬೇರೆ ಯಾರೋ representatives ಬೋರ್ಡ್‌ನಲ್ಲಿ ಇರುತ್ತಾರೆ' ಎಂದಲ್ಲ. ಇದಕ್ಕೊಂದು Advisory Council ಇರುತ್ತದೆ, ಈ Advisory Council ಮೇಲೆ Board ಇರುತ್ತದೆ. Advisory Council ನಲ್ಲಿ ಆಯಾ ಪ್ರದೇಶದ ವ್ಯಾಪ್ತಿಗೆ ಬರತಕ್ಕಂಥ ಎಲ್ಲಾ Members of Parliament , Legislative Assembly and Council , All Adyakshas of Zilla Panchayats representing the Region and Regional Commissioner ಸಹ ಇರುತ್ತಾರೆ. Advisory Council ಮೇಲೆ ಬೋರ್ಡ್ ಬರುತ್ತದೆ. ಬೋರ್ಡ್‌ಗೂ ಕೂಡ ಪ್ರತಿ ವರ್ಷವೂ ಒಬ್ಬೊಬ್ಬರು ಆ region ಗೆ ಸೀಮಿತವಾಗಿರತಕ್ಕ ಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. ಪ್ರತಿ ಜಿಲ್ಲೆಯಿಂದಲೂ ಕೂಡ ಶಾಸಕರು ಮತ್ತು ಸಂಸತ್ ಸದಸ್ಯರು ಇದರಲ್ಲಿ represent ಮಾಡುತ್ತಿರುತ್ತಾರೆ.

ಅಧ್ಯಕ್ಷರು :– ಬೋರ್ಡ್ ಮೆಂಬರ್ಸ್ ಯಾರ್ಯಾರು?

ಶ್ರೀ ಟಿ.ಬಿ.ಜಯಚಂದ್ರ :– ಬೋರ್ಡ್‌ನಲ್ಲಿ ಸುಮಾರು 30 ಜನ ಇರುತ್ತಾರೆ.

ಶ್ರೀ. ಕೆ.ಜಿ.ಬೋಪಯ್ಯ:– 371 [ಜೆ] ನಲ್ಲಿ ಈ ಬೋರ್ಡ್‌ನ ಪ್ರಸ್ತಾಪವಿಲ್ಲ. Governor is the Supreme .

ಶ್ರೀ ಟಿ.ಬಿ.ಜಯಚಂದ್ರ :– ದಯಮಾಡಿ ತಾವು ಈ Notification ನೋಡಬೇಕು. ಈ Notification ಅನ್ನು ದಿನಾಂಕ 06.11.2013 ರಂದು issue ಮಾಡಲಾಗಿದೆ. ಇದೊಂದು ದೊಡ್ಡದಾಗಿರತಕ್ಕ Notification ಆಗಿದೆ. Advisory Council ಇರುತ್ತದೆ, ಅದರ ಮೇಲೆ ಬೋರ್ಡ್ ಬರುತ್ತದೆ. ಎಲ್ಲವೂ ಸಂವಿಧಾನ ಬದ್ಧವಾಗಿರತಕ್ಕ ರೀತಿಯಲ್ಲಿ independent ಆಗಿ ಆ ಬೋರ್ಡ್ function ಮಾಡುತ್ತದೆ. ಅದಕ್ಕೆ funds ಅನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದವರು ಜನಸಂಖ್ಯೆಗೆ ಅನುಗುಣವಾಗಿ ನಿಗದಿ ಮಾಡುತ್ತಾರೆ. ಇದರಿಂದಾಗಿ ಇದಕ್ಕೆ ಹೆಚ್ಚು ಅವಕಾಶಗಳಿರುತ್ತವೆ. ಡಾ : ನಂಜುಂಡಪ್ಪನವರ ವರದಿಯ ಆಧಾರದ ಮೇಲೆ, ಇನ್ನೊಂದು ಬೋರ್ಡ್ ಅನ್ನು ಮಾಡಿದ್ದವೋ, ಅದು ಈಗ ಸ್ವತಂತ್ರವಾಗಿದೆ. ಆ ಬೋರ್ಡ್‌ನಲ್ಲಿ ಆ ಭಾಗದಲ್ಲಿ ಇರತಕ್ಕೆ ಯಾವುದೇ inadequacy ಎಲ್ಲವನ್ನೂ ful-fill ಮಾಡತಕ್ಕ ರೀತಿಯಲ್ಲಿ ಅವರದೇ ಆದಂತಹ ರೀತಿಯಲ್ಲಿ ಕಾರ್ಯಾಚರಣೆಯನ್ನು ಮಾಡುವುದಕ್ಕೆ ಅವಕಾಶವಿದೆ. ಈ ಬೋರ್ಡ್‌ಗೆ ಹೆಚ್ಚು ಸಂಪನ್ಮೂಲ ಸಿಗುತ್ತದೆ, ಹೆಚ್ಚು ಅಧಿಕಾರ ಸಿಗುತ್ತದೆ ಪ್ರತಿ ವರ್ಷವೂ ಕೂಡ ಇದಕ್ಕೆ ಇಂತಿಷ್ಟು ಎಂದು ಹಣವೂ ಕೂಡ ನಿಗದಿಯಾಗುತ್ತದೆ. ಇದಕ್ಕೆ ಹೆಚ್ಚಿನ ಅಧಿಕಾರ ಇರತಕ್ಕೆ ಹಿನ್ನೆಲೆಯಲ್ಲಿ ಹಳೆಯದನ್ನು ನಿರಸನಗೊಳಿಸುತ್ತಿದ್ದೇವೆ.

ಅಧ್ಯಕ್ಷರು:– ಹೊಸದಾಗಿ ರಚನೆಯಾಗಿರುವ ಹೈದರಾಬಾದ್–ಕರ್ನಾಟಕ ಬೋರ್ಡ್‌ನಲ್ಲಿ ನಮ್ಮ ಶಾಸಕರಿಗೆ ಮತ್ತು ಪರಿಷತ್ ಸದಸ್ಯರಿಗೆ ಅನುಕೂಲವಾಗುತ್ತದೆಯೇ?

ಶ್ರೀ ಟಿ.ಬಿ.ಜಯಚಂದ್ರ :– ಎಲ್ಲರಿಗೂ ಅನುಕೂಲವಿದೆ.ಈ Notification ಅನ್ನು ಬಹುಶಃ ನೀವ್ಯಾರೂ ನೋಡಿರಲಿಕ್ಕಿಲ್ಲ. ನಾನು ಆ ನೋಟಿಫಿಕೇಷನ್ ಅನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಇದೊಂದು ದೊಡ್ಡದಾಗಿರತಕ್ಕ ನೋಟಿಫಿಕೇಷನ್ ಆಗಿದೆ.

ಶ್ರೀ ಕೆ.ಜಿ.ಬೋಪಯ್ಯ :– ಅದರಲ್ಲಿ Governor's role ಏನಿದೆ ಎಂಬುದನ್ನು ಹೇಳಿ?

ಶ್ರೀ ಟಿ.ಬಿ.ಜಯಚಂದ್ರ :– Advisory Council ಎಂದರೆ ಏನು? ಅದರ function ಏನು? ಎಂಬುದೆಲ್ಲಾ ಈ ನೋಟಿಫಿಕೇಷನ್‌ನಲ್ಲಿದೆ. ಬೋರ್ಡ್‌ನ meeting ಅನ್ನು ಮಾಡಬೇಕಾದರೆ ಯಾವ್ಯಾವ ರೀತಿಯಲ್ಲಿ ಮಾಡಬೇಕು? ಏನು ಮಾಡಬೇಕು? ಎಂಬ ಬಗ್ಗೆ ಇದರಲ್ಲಿದೆ. [functions of the Board ಬಗ್ಗೆ ಅದರಲ್ಲಿ ಈ ರೀತಿ ಇದೆ.

(a) consider the recommmendations of the Advisory Council made in the Annual draft development plan; ಪ್ರತಿ ಬಜೆಟ್ಟನ್ನೂ ಕೂಡ ಮಾಡುತ್ತಾರೆ.

(b) ascertain relative levels of development in different sectors in relation to its Region on the basis of appropriate indicators , . .

ಶ್ರೀ ಜಗದೀಶ್ ಶೆಟ್ಟರ್ –Advisory Council ನಲ್ಲಿ ಯಾರ್ಯಾರು ಇರುತ್ತಾರೆ. ಎಂಬುದನ್ನು ಹೇಳಿ,

ಶ್ರೀ ಟಿ.ಬಿ.ಜಯಚಂದ್ರ :– ಹೇಳುತ್ತೇನೆ

There shall be an advisory Council consisting of the following namely :

[a] District incharge Ministers in charge of Revenue Districts in the Region ;

[b] All members of the Parliament representing the Region ;

[c] All members of the Karnataka State Legislative Assembly the Region ;

[d] All members of the Karnataka State Legislative Council whose name has been registered as Voter in that Region ;

(e) All Ahyakshas of Zilla Panchayats representing the Region ;

[f] Regional Commissioner of Gulbarga Division ;

[g] All Deputy Commissioners of the Revenue Districts in the Region;

[h) Mayors of the Municipal Corporations and Ahyakshas of city Municipal Councils in the region ;

[j] Secretary of the Board member Secretary . . . . . ಈ ರೀತಿ Advisory Council ಇದೆ. ಇದರ ಮೇಲೆ ಬೋರ್ಡ್ ಇದೆ. Notification ನೋಡಿದರೆ ನಿಮಗೆ ಎಲ್ಲವೂ ಗೊತ್ತಾಗುತ್ತದೆ. ಇದು ಈಗಾಗಲೇ ಹಳೆಯ ನೋಟಿಫಿಕೇಷನ್ ಆಗಿದೆ.

ಶ್ರೀ ಕೆ.ಜಿ.ಬೋಪಯ್ಯ :– What is the role of the Governor ? What are his powers ? ಎಂಬುದನ್ನು ಹೇಳಿ.

ಶ್ರೀ ಉಮೇಶ್ ವಿ.ಕತ್ತಿ :– ಈಗಾಗಲೇ ಮಹಾರಾಷ್ಟ್ರದ ವಿದರ್ಭದಲ್ಲಿ 371 ಜೆ implement ಆಗಿದೆ. ಅಲ್ಲಿ ಬೋರ್ಡ್‌ಗೆ ಯಾವ ಅಧಿಕಾರವಿಲ್ಲ. ಅಲ್ಲಿ 100% ಅಧಿಕಾರ Governor ಗೆ ಇದೆ. ರಾಜ್ಯ ಸರ್ಕಾರಕ್ಕೂ ಯಾವುದೇ ಅಧಿಕಾರವಿಲ್ಲ. ಜನಸಂಖ್ಯೆಗೆ ಆಧಾರದ ಮೇಲೆ ದುಡ್ಡಿನ ಪ್ರಾವಿಷನ್ ಮಾಡಬೇಕೆನ್ನುವ ಅಧಿಕಾರ ಸರ್ಕಾರಕ್ಕಿದೆ. ಅದನ್ನು ಬಿಟ್ಟು ಹೆಚ್ಚಿಗೆ ಅನುದಾನ, ಮಾನ್ಯ ರಾಜ್ಯಪಾಲರು ಮನಸ್ಸು ಮಾಡಿದರೆ he can divert the funds from State to that region and he can implement the development works,

ಯಾವುದೇ ಬೋರ್ಡ್‌ಇಲ್ಲ ಯಾವುದೇ ತೀರ್ಮಾನ ವನ್ನು ಅನುಷ್ಠಾನಕ್ಕೆ ತರಲಿಕ್ಕೆ ಸಾಧ್ಯವಿಲ್ಲ. 371 (ಜೆ) ಇದರಲ್ಲಿ ಏನಾದರೂ ಇದ್ದರೆ ಹೇಳಿ. ನೀವು ಮಾಡಿರುವಂತಹ ಈ ಬೋರ್ಡ್‌ಗೆ ಈ ರೀತಿ Advisory Council District Minister ಸದಸ್ಯರಾಗಿರುವುದು ಇವೆಲ್ಲಾ ಬೇಡ. ನಿಮ್ಮ ಸಂವಿಧಾನ ತಿದ್ದುಪಡಿಯಲ್ಲಿ ಏನಾದರೂ ಆ ಭಾಗದ ಜನಪ್ರತಿನಿಧಿಗಳಿಗೆ ಅಧಿಕಾರವಿದೆಯೇ? ಅಥವಾ ಅವರ ಸಲಹೆಗಳನ್ನು ಅವರು ಹೇಳಿದಂತೆ implement ಮಾಡುತ್ತಾರೆಯೇ? 100% ನಮ್ಮ ಗೌರವಾನ್ವಿತ ಮಾನ್ಯ ರಾಜ್ಯಪಾಲರಿಗೆ ಅಧಿಕಾರವಿದೆಯೇ ವಿನ: ಬೇರೆ ಯಾರಿಗೂ ಇಲ್ಲ. ತಾವು ಹೇಳಿದಂತೆ ಜನಸಂಖ್ಯೆ ಆಧಾರದ ಮೇಲೆ ಅನುದಾನವನ್ನು ಮೀಸಲಿಡಬಹುದು. ಅದಕ್ಕಿಂತ ಹೆಚ್ಚಿಗೆ ದುಡ್ಡು ಬೇಕಾಗಿದ್ದರೆ, ರಾರಿಜಿಥಿ ಸರ್ಕಾರ ವನ್ನು ಹೆಚ್ಚು ಕಡಿಮೆ ಕೇಳಬೇಕಾಗಿಲ್ಲ. ಗೌರವಾನ್ವಿತ ಮಾನ್ಯ ರಾಜ್ಯಪಾಲರು ಮನಸ್ಸು ಮಾಡಿದರೆ, ಪೂರಾ ಫಂಡ್ ಅನ್ನು ಅಲ್ಲಿಗೆ ಡೈವರ್ಟ್ ಮಾಡಿ ಅವರು ಕೆಲಸ ಮಾಡಿಸಲಿಕ್ಕೆ ಸಾಧ್ಯವಿದೆ. ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕಿಂತ, ಮಾನ್ಯ ಅಧ್ಯಕ್ಷರಿಗೆ ನಾನು ವಿನಂತಿ ಮಾಡುತ್ತೇನೆ, ಮಹಾರಾಷ್ಟ್ರದ ವಿದರ್ಭದಲ್ಲಿ ಈಗಾಗಲೇ ಈ ಕಾರ್ಯಕ್ರಮ ಜಾರಿಯಲ್ಲಿದೆ. ನಮ್ಮ ಹೈದರಾಬಾದ್ ಕರ್ನಾಟಕ ಭಾಗದ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇದನ್ನು ಸರಿಯಾದ ರೀತಿಯಲ್ಲಿ ಸರ್ಕಾರ implement ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಈ ರೀತಿಯಲ್ಲಿ ಹರಿಬರಿಯಲ್ಲಿ ಬಿಲ್‌ಗಳನ್ನು ಪಾಸ್ ಮಾಡಿದಲ್ಲಿ ಮುಂದೆ ಕಷ್ಟ ಅನುಭವಿಸುವವರು ಆ ಭಾಗದ ಜನ. ಈಗ ಇರುವ ಅಭಿವೃದ್ಧಿಯನ್ನೂ ಕಳೆದುಕೊಳ್ಳುತ್ತಾರೆ, ಮುಂದಿನ ಅಭಿವೃದ್ಧಿ ಮಾಡುವ ಪ್ರಶ್ನೆಯೇ ಉಳಿಯುವುದಿಲ್ಲ. ಆ ದೃಷ್ಟಿಯಿಂದ ಈ ಭಾಗದ ಜನಪ್ರತಿನಿಧಿಗಳಿಗೆ ಪೂರ್ಣ ಪರಿಚಯ ಮಾಡಿಕೊಡುವ ಸಲುವಾಗಿ ತಾವು ವಿದರ್ಭಕ್ಕೆ ಟೀಮ್‌ವೋಂದನ್ನು ಕಳುಹಿಸಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು:–ಇನ್ನೊಂದು ಬಿಲ್ ಅನ್ನು ಇದಕ್ಕಾಗಿ ತರಲಾಗುತ್ತದೆಯೇ?

ಶ್ರೀ ಕೆ.ಬಿ.ಬೋಪಯ್ಯ :– 371 (ಜೆ)ಯಲ್ಲಿ Governor ಗೆ ಅಧಿಕಾರ ಕೊಟ್ಟಿದ್ದಾರೆ. ಅವರ ಆಧಿಕಾರವೇನು? ಎಂಬುದನ್ನು ಹೇಳಿ, Advice

ಕೊಟ್ಟಿದ್ದನ್ನು Governor ತೆಗೆದುಕೊಳ್ಳಬೇಕು ಎಂದೇನಿಲ್ಲ. Is it binding on the Governor ?

ಟಿ.ಬಿ.ಜಯಚಂದ್ರ :– ತಾವು ಈ Notification ಅನ್ನು ಪೂರ್ಣ ಓದಿದ್ದರೆ, ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ. ಇದರಲ್ಲಿ Power of the Governor ಬಗ್ಗೆ ಈ ರೀತಿ ಹೇಳಿದೆ. " Power of the Governor to direct the Board : Notwithstanding anything contained in this order or in any other law the time being in force , if in the opinion of the Governor or on the advice of the Council of Ministers , it is expedient in public interest so to do , he may, by general or special order issue such directions to the Board as are to carry out the purposes of the order . It shall be the duty of the Board to comply with such directions " ಇದುವರೆವಿಗೂ ಈ ಬೋರ್ಡಿಗೆ ಕೊಡುತ್ತಿದ್ದುದು ಎಷ್ಟು ಗೊತ್ತಾ? ಒಂದು ವರ್ಷದಲ್ಲಿ ರೂ.65 ಕೋಟಿ ಕೊಟ್ಟಿದ್ದು, ಖರ್ಚಾಗಿರುವುದು ಮೂರು ವರ್ಷ, ಈಗ ನಾವು supplementary estimates ನಲ್ಲಿ ಕೊಟ್ಟಿರುವುದು ರೂ.153 ಕೋಟಿ. ಹೌದು, supplementary estimate, ನಲ್ಲಿ ಮಾಡಿರುವ ಪ್ರಾವಿಷನ್. Regular budget ನಲ್ಲಿ you will get funds.

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ಅನುಮಾನ apprehension ಏನೆಂದರೆ, ಈ Hyderabad- Karnataka Development Board ಇದೆಯಲ್ಲಾ, ಆ ಬೋರ್ಡಿನಲ್ಲಿರುವ ಎಂಪಿ, ಎಂಎಲ್ಎ ಗಳಿಗೆ ಸಮಾನವಾಗಿ ಬಂದಂಥ ಹಣವನ್ನು equal ಆಗಿ distribute ಮಾಡುತ್ತಾರೆ. ಹೌದಲ್ಲವೇ? ಇಲ್ಲಿ ಆ ರೈಟ್ ಇದೆಯಾ?

ಶ್ರೀ ಟಿ.ಬಿ.ಜಯಚಂದ್ರ :– ಹೌದು.

ಶ್ರೀ ಉಮೇಶ್ ವಿ.ಕತ್ತಿ : ಇಲ್ಲ. ಇಲ್ಲ. ಮಹಾರಾಷ್ಟ್ರ ವಿದರ್ಭ ರಾಜ್ಯಪಾಲರ ಅಧೀನದಲ್ಲಿ ನಡೆಯುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಅವರು Council, Board ಎಂದು ಎಲ್ಲಾ ಹೇಳಿದರಲ್ಲ ಅದರಲ್ಲಿ ಇವರೆಲ್ಲಾ recommend ಮಾಡಬಹುದು. ಇವರೆಲ್ಲರೂ ತಮ್ಮ ಸಲಹೆ ಸೂಚನೆಗಳನ್ನು ನೀಡಬಹುದು. SRI T.B JAYACHANDRA Implementing authority is Board only.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : Governor Shall act in accordance with the advice of the Board ಎಂದಿದ್ದರೆ ನಾನು ಒಪ್ಪುತ್ತೇನೆ, ಅದನ್ನು ಅವರು ತೆಗೆದುಕೊಳ್ಳಬಹುದು ಬಿಡಬಹುದು, ನೀವು ಓದುವಾಗ expedient ಎಂದು ಆ ಶಬ್ದವನ್ನು ನೀವೇ ಹೇಳಿದ್ದೀರಿ, ಇದು it is only a ಸಲಹಾ ಸಮಿತಿ.

ಶ್ರೀ ಟಿ.ಬಿ.ಜಯಚಂದ್ರ :– ಈಗ Supplementary estimates ನಲ್ಲಿ ನಾವು ₹ 153 ಕೋಟಿ ಕೊಟ್ಟಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ : ಕೊಟ್ಟಿರುವುದಕ್ಕೆ ತಕರಾರಿಲ್ಲ ಅಭಿನಂದನೆ, ಕೊಡಿ, ಆದರೆ spend ಮಾಡುವುದಕ್ಕೆ ಆ ಭಾಗದ ಶಾಸಕರಿಗೆ ಹಕ್ಕೇನಿದೆ? ಸಲಹೆಯನ್ನು ರಾಜ್ಯಪಾಲರು ತೆಗೆದುಕೊಳ್ಳಲೇಬೇಕೆಂದು ಎಲ್ಲಿದೆ ಹೇಳಿ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಇದನ್ನು ತೆಗೆದುಕೊಂಡು ಹೇಗೆ ಕೊಡುತ್ತಾರೆಂದು ನೋಡಿಕೊಂಡು, ಆಮೇಲೆ ಈ ಬೋರ್ಡಿನ ಬಗ್ಗೆ ನಿರ್ಣಯ ಮಾಡಲಿ, ಇನ್ನೊಂದು ವರ್ಷ ಈ ಬೋರ್ಡ್ ಮುಂದುವರೆಯಲಿ, ಏನಾಗುತ್ತದೆ ಆ ಭಾಗಕ್ಕೆ ₹. 70 ಕೋಟಿ ಜಾಸ್ತಿಯಾಗುತ್ತದೆ, ಆಗಲಿ ಏನು ತೊಂದರೆ ಇದೆ?

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದಲ್ಲಿ ವಿನಂತಿ ಮಾಡುವುದೇನೆಂದರೆ, ಈ ಬಿಲ್ ಅನ್ನು ಹಿಂಪಡೆಯಲ್ಲಿ, ವಿದರ್ಭ ಭಾಗಕ್ಕೆ ಹೋಗಿ ಜನ ಪ್ರತಿನಿಧಿಗಳನ್ನು ಸರ್ಕಾರ ಏನು ನಡೆಯುತ್ತಿದೆ ಎಂದು ನೋಡಿ, ಆ ಪ್ರಕಾರ ಮಾಡಲಿ. ಇಲ್ಲದಿದ್ದರೆ ಆ ಭಾಗದ ಜನಪ್ರತಿನಿಧಿಗಳು

ಏನು ಮಾಡುತ್ತಿದ್ದಾರೆಂದು ನೋಡಲಿ ನಾನು ಮಹಾರಾಷ್ಟ್ರದ ವಿದರ್ಭದಲ್ಲಿ ಆಗುತ್ತಿರುವ ಕಾರ್ಯಕ್ರಮವನ್ನು ನೋಡಿಯೇ ನಿಮಗೆ ಹೇಳುತ್ತಿದ್ದೇನೆ. ನಮಗೆಲ್ಲ ಹೆಚ್ಚಿನದಾಗಿ ಎಸ್.ಎಂ.ಕೃಷ್ಣರವರು ಮಹಾರಾಷ್ಟ್ರದ ರಾಜ್ಯಪಾಲ ರಾಗಿದ್ದರು, ಅವರಿಗೂ ಆ ಅನುಭವ ಇದೆ, ಅವರನ್ನೂ ಸಂಪರ್ಕಿಸಿ, ನೀವು ಈ ರೀತಿ ಮಾಡಿದರೆ ಆ ಭಾಗದ ಅಭಿವೃದ್ಧಿಯಾಗುವುದಿಲ್ಲ. ನಾನು ಯಾವುದೇ ಪಾರ್ಟಿ, ಪಂಗಡವೆಂದು ಮಾತನಾಡುತ್ತಿಲ್ಲ, ಆ ಭಾಗ ಅಭಿವೃದ್ಧಿಯಾಗುವ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಈ ಬಿಲ್ ಅನ್ನು ಹಿಂಪಡೆಯಬೇಕು, ಒಂದು ಸಮಿತಿ ಮಾಡಿ ಕರೆದುಕೊಂಡು ಹೋಗಿ ತೋರಿಸಿಬಿಟ್ಟು, ಸಾಧಕ ಬಾಧಕಗಳ ಬಗ್ಗೆ ಚರ್ಚೆಯಾಗಿ ಈ ಬಿಲ್ ಅನ್ನು ತನ್ನಿ.

ಶ್ರೀ ಬಿ.ಆರ್.ಪಾಟೀಲ್ : ಈಗ ಸಂಪುಟ ಉಪಸಮಿತಿ ಮಾಡಿ, ಎಲ್ಲಾ ಶಾಸಕರನ್ನು ಕರೆಸಿ ದೀರ್ಘವಾಗಿ ಚರ್ಚೆ ಮಾಡಿ, ಸಾಕಷ್ಟು ಪ್ರಯತ್ನ ಮಾಡಿ ಕಾಯಿದೆಗೆ ಒಂದು ರೂಪವನ್ನು ಕೊಟ್ಟಿದ್ದಾರೆ. ಈಗ ಕಾಯಿದೆ ಅನುಷ್ಠಾನಕ್ಕೆ ಬರದಿರುವ ಕಾರಣಕ್ಕಾಗಿ ಅನೇಕ ನೇಮಕಾತಿಗಳು ಅಲ್ಲಿ ನಿಂತು ಹೋಗುತ್ತವೆ. ಈ ರೀತಿ ಮತ್ತೆ ಏನಾದರೂ ಬೇರೆ ಕಡೆ ಕಳುಹಿಸಿ ಅಧ್ಯಯನ ಮಾಡುವ ಎಲ್ಲಾ ಪ್ರಯತ್ನಗಳಾಗಿದ್ದಾವೆ. ಇದರ ಬಗ್ಗೆ ನಮ್ಮ ಹೈದರಾಬಾದ್–ಕರ್ನಾಟಕದ ಶಾಸಕರು ಏನಾದರೂ ಅದಕ್ಕೆ ಇನ್ನು ಏನಾದರೂ addition , deletion , ಸಲಹೆ ಸೂಚನೆಗಳನ್ನು ತೆಗೆದುಕೊಂಡು . . . .

ಶ್ರೀ ಜಗದೀಶ್ ಶೆಟ್ಟರ್ : ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್‌ಗೆ ಕೊಟ್ಟಿರುವ ಅಧಿಕಾರ ಹೋಗಬಾರದೆನ್ನುವುದಷ್ಟೆ ಕಳಕಳಿ, ಅದನ್ನು ವಿಚಾರ ಮಾಡಿಕೊಂಡು ಮಾಡಿ,

ಶ್ರೀ ಶಿವರಾಜ್ ಎಸ್ ತಂಗಡಗಿ: ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್‌ಗೆ ರೂ.65 ಕೋಟಿ ಮಾತ್ರ ಕೊಟ್ಟಿದ್ದರು, ಈ ಸಾರಿ ಸಪ್ಲಿಮೆಂಟರಿ ಬಜೆಟ್‌ನಲ್ಲಿ ₹ 153 ಕೋಟಿ ಕೊಡಲಾಗಿದೆ.

ಅಧ್ಯಕ್ಷರು : ಕ್ವಾಂಟಿಟಿಯನ್ನು ಬಿಟ್ಟು ಬಿಡಿ.

ಶ್ರೀ ಶಿವರಾಜ್ ಎಸ್ ತಂಗಡಗಿ : ಮಾನ್ಯ ಅಧ್ಯಕ್ಷರೆ, ಈಗ ಆ ಭಾಗದ ಎಲ್ಲಾ ಶಾಸಕರನ್ನು ಕರೆದು ಸುದೀರ್ಘವಾದ ಚರ್ಚೆ ಮಾಡಿದ್ದೇವೆ ಮತ್ತು ಆ ಭಾಗದ ಸಂಘ ಸಂಸ್ಥೆಗಳೊಡನೆ ಚರ್ಚೆ ಮಾಡಿದ್ದೇವೆ ಅವರು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಎಲ್ಲಾ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಈ ಬಿಲ್ ಅನ್ನು ಮಾಡಿರುವುದು. ದಯಮಾಡಿ ನಮ್ಮ ಭಾಗದ ಬಗ್ಗೆ ನಮಗೆ ಕಾಳಜಿ ಇದೆ, ದಯಮಾಡಿ ಇದಕ್ಕೆ ಸಪೋರ್ಟ್ ಮಾಡಿ, ಆ ಭಾಗದ ಜನರ ಕಷ್ಟವೇನೆಂದು ನಮಗೆ ಗೊತ್ತಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಜನಪ್ರತಿನಿಧಿಗಳಿಗೆ ಏನೊಂದು ಹಕ್ಕು ಸಿಕ್ಕಿದೆ, ಅದು ಹೋಗಬಾರದಷ್ಟೇ ಎನ್ನುವ ಕಾಳಜಿ, ಅದನ್ನು ನೀವು ಸರಿ ಮಾಡಿ. ಇನ್ನೊಂದು ಸಲಹೆ, ಮೊದಲಿನಿಂದಲೂ ನಾವು ಹೈದರಾಬಾದ್–ಕರ್ನಾಟಕ ಏರಿಯಾ ಎಂದು ಹೇಳಿಕೊಂಡು ಬಂದಿದ್ದೇವೆ ಆದರೆ ಅಲ್ಲಿಯ ಜನಮಾನಸದಲ್ಲಿ ಜನರ ಬಯಕೆ ಏನೆಂದರೆ ಅದಕ್ಕೆ ಕಲ್ಯಾಣ ಕರ್ನಾಟಕ ವೆಂದು ಹೆಸರಿಡಬೇಕೆನ್ನುವುದು. ಅಂದರೆ, ಈ ಕಡೆ ನಾವು ಬಾಂಬೆ–ಕರ್ನಾಟಕ ಎನ್ನುತ್ತೇವೆ, ಅದನ್ನು ಕಿತ್ತೂರು ಕರ್ನಾಟಕವೆಂದು ಕರೆಯಬೇಕೆನ್ನು ವುದು ಭಾವನೆ. ಅಂದರೆ ಜನಮಾನಸದಿಂದ ಬಂದಿದೆ. ಹೈದರಾಬಾದ್–ಕರ್ನಾಟಕ ಮತ್ತು ಬಾಂಬೆ– ಕರ್ನಾಟಕ ಎಂದಿದೆ. ಆದರೆ ಹೈದರಾಬಾದ್–ಕರ್ನಾಟಕ ಎನ್ನುವುದು ಗುಲಾಮಗಿರಿಯ ಸಂಕೇತವನ್ನು ತೋರಿಸುತ್ತದೆ ಅಂದರೆ, ಈ ರೀತಿಯ ಕಾನೂನುಗಳನ್ನು ಮಾಡುವ ಸಂದರ್ಭದಲ್ಲಿ ಈಗೇನು ವಿಶೇಷವಾದ ಮಂಡಳಿಯನ್ನು ಮಾಡಿದ್ದೀರಿ, ಆ ಸಂದರ್ಭದಲ್ಲಿ ಕಾನೂನು ರೀತಿಯಾಗಿ_ ಅದಕ್ಕೆ ಕಲ್ಯಾಣ ಕರ್ನಾಟಕ ಬೋರ್ಡ್ಎಂದು ಒಂದು identification ಕೊಟ್ಟುಬಿಡಿ, ಅದನ್ನು ದಿನನಿತ್ಯ ಉಪಯೋಗ ಮಾಡುವು ದಕ್ಕೂ ಸಾಧ್ಯವಿದೆ, ಅದನ್ನೂ ಪರಿಗಣಿಸಬೇಕಾಗುತ್ತದೆ. ಇದನ್ನು ತಿದ್ದುಪಡಿ ಮಾಡಿ ಹೈದರಾಬಾದ್ –ಕರ್ನಾಟಕದ ಬದಲಾಗಿ ಕಲ್ಯಾಣ–ಕರ್ನಾಟಕ ಮಂಡಳಿ ಎಂದು ಮಾಡಿದರೆ ಚೆನ್ನಾಗಿರುತ್ತದೆ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಲಾಜಿಕಲ್ ಆಗಿ ಮಾತನಾಡಿದ್ದಾರೆ. ಎಷ್ಟು ದಿವಸ ಗುಲಾಮಗಿರಿಯ ಸಂಕೇತವಾಗಿ ಹೈದರಾಬಾದ್, ಹೈದರಾಬಾದ್ ಎಂದು ಹೇಳುವುದು ಹೈದರಾಬಾದ್–ನಿಜಾಮ್ ಹೋಗಿ ಎಷ್ಟೋ ವರ್ಷವಾಯಿತು, ಎಷ್ಟು ದಿವಸ ಇನ್ನೂ ಆ ಕಳಂಕವನ್ನು ಹೊತ್ತುಕೊಂಡು ನಾವು ಓಡಾಡಿ ಬೇಕು? ನೀವು ಬೇರೆ ಏನೇ ಹೆಸರಿಡಿ, ಕಲ್ಯಾಣ ಕರ್ನಾಟಕ ಹೆಸರಿಟ್ಟರೆ ನಾವು ಸ್ವಾಗತ ಮಾಡುತ್ತೇವೆ. ಏಕೆಂದರೆ, ಒಂದು ದೊಡ್ಡ ಸಾಮಾಜಿಕ ಕ್ರಾಂತಿ ಆ ಭಾಗದಲ್ಲಾಗಿದೆ, ಕಲ್ಯಾಣ ಕರ್ನಾಟಕ ಎಂದು ಹೆಸರಿಡುವುದು ಸೂಕ್ತವಿದೆ.

ಶ್ರೀ ಕೆ.ಶಿವಮೂರ್ತಿ : ಬಸವಣ್ಣನ ವಿಚಾರಧಾರೆಯನ್ನು ಕೇವಲ ಆ ಭಾಗಕ್ಕೆ ಸೀಮಿತಗೊಳಿಸುತ್ತೀರಿ, ಅವರು ಲೋಕ ಕಲ್ಯಾಣಕ್ಕೆ ಹೋರಾಡಿದವರು.

ಶ್ರೀ ಬಿ.ಬಿ.ನಿಂಗಯ್ಯ : ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರುವುದು ಸೂಕ್ತವಾದ ಹೆಸರು, ಈ ಸದನ ಒಪ್ಪುವುದಾದರೆ ಈ ಬಿಲ್‌ಗೆ ತಿದ್ದುಪಡಿ ತಂದು ಸೇರಿಸುವುದು ಸ್ವಾಗತಾರ್ಹ.

ಶ್ರೀ ಸಿ.ಟಿ.ರವಿ : ಹೈದರಾಬಾದ್–ಕರ್ನಾಟಕವೆಂದರೆ ಮತ್ತೆ ಕರಾಳ ನೆನಪುಗಳು ಕಾಡುತ್ತವೆ, ಆ ಕರಾಳ ನೆನಪುಗಳು ಮತ್ತೆ ಮತ್ತೆ ಕಾಡುವುದು ಬೇಡ, ಕಲ್ಯಾಣ ಕರ್ನಾಟಕ ಎಂದು ಕರೆಯುವುದು ಸೂಕ್ತ ಸಾಮಾಜಿಕ ಶಾಂತಿ, ಕಲ್ಯಾಣ ಕ್ರಾಂತಿಯ ಮೂಲಕವೇ ಒಂದು ಸಾಮಾಜಿಕ ಹರಿಕಾರ ಎಂದು ನಾವು ಬಸವಣ್ಣನವರನ್ನು ನೆನಪು ಮಾಡಿಕೊಂಡಂತಾಗುತ್ತದೆ. ಹಾಗಾಗಿ ಕಲ್ಯಾಣ ಕರ್ನಾಟಕ ಎನ್ನುವ ಹೆಸರನ್ನೇ ಇಡಿ, ಬಸವಣ್ಣ ಯಾರ ಸ್ವತ್ತಲ್ಲ, ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಕಳಿವಿಲ್ಲವೆಂದು ಅವರನ್ನು ಭಾಗ ಮಾಡಬೇಡಿ, ಅವರು ಯಾರ ಸ್ವತ್ತೂ ಅಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ಇನ್ನೊಂದು ಸಾರಿ ಪುನರ್ ಪರಿಶೀಲನೆ ಮಾಡುತ್ತೀರೆನೂ ನೋಡಿ.

ಶ್ರೀ ಶಿವರಾಜ್ ಎಸ್ ತಂಗಡಗಿ : ಆ ಭಾಗದ ಶಾಸಕರನ್ನೆಲ್ಲಾ ಕರೆದು ಚರ್ಚೆ ಮಾಡಿಯೆ ಇದನ್ನು ತಂದಿರುವುದು.

ಶ್ರೀ ಬಿ.ಆರ್.ಪಾಟೀಲ್: ಇದರಲ್ಲಿ ಸಿಕ್ರೇಟ್ ಏನಿದೆ? ಕಲ್ಯಾಣ ಕರ್ನಾಟಕವೆಂದು ತಿದ್ದುಪಡಿಯನ್ನು ತರಲಿ..

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ವಿರೋಧಕ್ಕೋಸ್ಕರ ವಿರೋಧ ಮಾಡುವುದು ಸರಿಯಲ್ಲ, ಹೈದರಾಬಾದ್ ಎನ್ನುವುದನ್ನು ತೆಗೆದು ಹಾಕಿ.....

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಸಂವಿಧಾನದ ಮೂಲ ಉದ್ದೇಶ ಏನೆಂಬುದನ್ನು ಒಂದು ಶಬ್ದದಲ್ಲಿ ಹೇಳತ್ತೇನೆ.

"The establishment of a separate development board for Hyderabad - Karnataka region with a provision that the report on the working of Board will be placed each year before the State Legislative Assembly . ಇದು ಒಂದು . Equitable allocation of funds for the developmental expenditure over the said region subject to requirements of the state as a whole . Equitable opportunities and facilities for the people belonging to the said region I am matter of public employment, education, vocational training subject to the requirement of the state as a whole . An order under Sub Rule (c) of clause I may be provided for reservation of a proportion of seats in educational , Vocational training institutions in Hyderabad Karnataka region for the students who belong to that region by birth or domicile " . These are all the advantages It is given in the constitution ಇವೆಲ್ಲ Constitution ಕೊಟ್ಟಿರುವುದು. ಮಾನ್ಯ ಉಮೇಶ್ ಕತ್ತಿಯವರು ಮಹಾರಾಷ್ಟ್ರದಲ್ಲಿ ಹಾಗೂ ಆಂಧ್ರದಲ್ಲಿ ಯಶಸ್ವಿಯಾಗಿಲ್ಲವೆಂದು ಹೇಳಿದರು. ಈ ಎಲ್ಲಾ ವಿಚಾರಗಳನ್ನೂ ಸಚಿವ ಸಂಪುಟದ ಸಮಿತಿಯ ಸದಸ್ಯರು ಹಾಗೂ ಎಲ್ಲಾ ಶಾಸಕರ ಜೊತೆ ಹಾಗೂ ಜನ ಪ್ರತಿನಿಧಿಗಳ ಜೊತೆ ನಾವು ಅಲ್ಲಿಯೇ

ಹೋಗಿ ಚರ್ಚೆ ಮಾಡಿದ್ದೇವೆ ಚರ್ಚೆ ಮಾಡಿ ಅವರು ಕೊಟ್ಟಂತಹ ಎಲ್ಲಾ ಸಲಹೆಗಳನ್ನು ಇದಕ್ಕೆ ಅಡಕ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ದಯಮಾಡಿ ನೀವು constitutional amendment ಮತ್ತು ಈ ರೂಲ್ಸ್ ಏನಾಗಿದೆ ಎನ್ನತಕ್ಕಂಥದ್ದನ್ನು ನೋಡಿದ್ದರೆ ಇದೆಲ್ಲಾ ಉದ್ಭವಿಸುತ್ತಿರಲಿಲ್ಲ. Allocation of funds for development expenditure - (1) The Governor of Karnataka shall ensure equitable allocation of funds for development expenditure over the areas of Board, subject to the requirements of the State as a whole, ಜನಸಂಖ್ಯೆಗೆ ಅನುಗುಣವಾಗಿರತಕ್ಕಂತಹ ರೀತಿಯಲ್ಲಿ...

ಅಧ್ಯಕ್ಷರು : ಅದು ಆಯಿತು. ಇಲ್ಲಿ ಸಂಶಯ ಎಲ್ಲಿ ಬರುತ್ತದೆ ಎಂದರೆ, ಈಗೇನು Hyderabad Karnataka Development Board ಇದೆಯಲ್ಲ, equal ಆಗಿ ಶಾಸಕರಿಗೆ ಹಾಗೂ ಎಂ.ಪಿ.ಗಳಿಗೆ ಹಂಚುತ್ತಾರಲ್ಲ ಈ ಸಿಸ್ಟಮ್ ಇರುತ್ತದಾ ಎಂದು ಕೇಳುತ್ತಿದ್ದಾರೆ.

ಶ್ರೀ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, Advisory Board ನಲ್ಲಿ ಅವರೆಲ್ಲರೂ ಸದಸ್ಯರಾಗಿರುತ್ತಾರೆ ಅವರು ಕೊಟ್ಟಂತಹ ಸಲಹ ಮೇಲೆ action plan ಆಗಿ ಅದರ ಅನುಷ್ಠಾನವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಆದರೆ ಅದರ ಮೇಲೆ ಅವರ rights ಹೋಗುತ್ತದಲ್ಲ,

ಶ್ರೀ ಟಿ.ಬಿ.ಜಯಚಂದ್ರ: ಏಕೆ ಹೋಗುತ್ತದೆ. ನೀವು Supplementary estimate ನಲ್ಲಿ ಕೊಟ್ಟಿರುವುದು 153 ಕೋಟಿ ಅಂದರೆ, ಸಂವಿಧಾನ ತಿದ್ದುಪಡಿ ಆದ ಮೇಲೆ ಪ್ರತಿ ವರ್ಷ....

ಶ್ರೀ ಉಮೇಶ್ ವಿ.ಕತ್ತಿ : ನೀವು ಹರಿಬರಿಯಲ್ಲಿ ಮಾಡಬೇಡಿ. ನಿಧಾನವಾಗಿ implement ಮಾಡಿ. ಆಮೇಲೆ ಮರ್ಜ್ ಮಾಡಿ.

ಶ್ರೀ ಟಿ.ಬಿ.ಜಯಚಂದ್ರ :parallel ಆಗಿ – te we are creating this Authority,

ಶ್ರೀ ಬಿ.ಆರ್.ಪಾಟೀಲ್ : Human Development Index ನಮ್ಮಲ್ಲಿದೆ. ಇದು available ಇದೆ. ಪ್ರತ್ಯೇಕವಾಗಿ ಆಯಾ ಜಿಲ್ಲೆಯ ತಾಲ್ಲೂಕಿನ ಜನಸಂಖ್ಯೆ ಆಧಾರದ ಮೇಲೆ Human Development Index ಅನ್ನು ಮಾಡಿದ್ದಾರೆ. ಇದನ್ನೆಲ್ಲಾ ಮಾಡಬೇಕಾದರೆ, ಇದಕ್ಕೆ ರಾಜ್ಯಪಾಲರು ಹಾಗೂ ಇದಕ್ಕೆ ಒಂದು ಮಂಡಳಿ ಇದೆ. ಆದರೆ ಇದಕ್ಕೆ planning ಮಾಡುವವರು ಯಾರು? Planning ಯಾವ ಆಧಾರದ ಮೇಲೆ ಮಾಡುತ್ತೀರಿ, Human Development Index ಆಧಾರದ ಮೇಲೆ ಮಾಡುತ್ತೀರೋ ಅಥವಾ ಶಾಸಕರು ಪ್ರಸ್ತಾವನೆ ಕೊಟ್ಟ ಆಧಾರದ ಮೇಲೆ ಮಾಡುತ್ತೀರೋ ಇದಕ್ಕೆ ಒಂದು ಸ್ಪಷ್ಟೀಕರಣ ಕೊಡಿ. ಇಲ್ಲದಿದ್ದರೆ ಅದು ದಾರಿ ತಪ್ಪಿ ಹೋಗುತ್ತದೆ. HKDB ಮಾಡುವಾಗ ಇದೇ ಉದ್ದೇಶ ಇತ್ತು. ಆದರೆ ಮುಂದೆ ಮುಂದೆ ಅದು ಹೀಗೆ ದಾರಿ ಬಿಟ್ಟಿದ್ದರಿಂದ ಏನು ಮುಖ್ಯ ಉದ್ದೇಶ ಇತ್ತು, ಆ ಉದ್ದೇಶದ ಗುರಿ ಮುಟ್ಟುವುದಕ್ಕಾಗಲಿಲ್ಲ. ಕೊನೆಗೆ ಅದು ರಾಜಕೀಯ ಅಧಿಕಾರದ ಇಚ್ಛಾಶಕ್ತಿಯ ಆಧಾರದ ಮೇಲೆ ನಡೆದುಕೊಂಡು ಹೋಯಿತು. ಇವತ್ತಿಗೂ ಕೂಡ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಆಗಲಿಲ್ಲ, ಅಲ್ಲಿ ದುಡ್ಡು ಬಂದಿದ್ದೆಲ್ಲಾ ಪೋಲಾಗಿ ಹೋಯಿತು. ಆ ತರಹ ಆಗಬಾರದು. ಅದರ ಬಗ್ಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕಾದರೆ Human Development index ಆಧಾರದ ಮೇಲೆ ತಾವು ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಂಡು Expertise planning ಮಾಡಿ.

ಶ್ರೀ ಟಿ.ಬಿ.ಜಯಚಂದ್ರ : ಈ ರೀತಿ ಹೇಳಿದರೆ ನಾನು ಎಲ್ಲರಿಗೂ ಉತ್ತರ ಕೊಡಬೇಕಾಗುತ್ತದೆ.

taking in to consideration the recommendations , if any , made by the Board; and

(b) where he considers it necessary and appropriate , seeks advice from any person or body of persons in the matter of the allocation of funds.

(C) Constitute standing or adhoc expert committee (s) to study regional imbalance and quantity back logs and resources required to correct back log, and in consultation with the Chief Minister of the State,various opportunities are there . Employment ಗಾಗಲಿ ಎಲ್ಲದಕ್ಕೂ ಅವಕಾಶವಿದೆ . ಈ ಬೋರ್ಡ್‌ಗೆ ಎಲ್ಲಾ ರೀತಿಯ ಹಣ ಖರ್ಚು ಮಾಡತಕ್ಕಂತಹ ಅಧಿಕಾರ ಇರುತ್ತದೆ. ಅದಕ್ಕೆ representatives ಇರುತ್ತಾರೆ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, Population - Wise fund allocation ಮಾಡುವುದಕ್ಕೆ provision ಮಾಡಿದ್ದಾರೆ. Population - wise divide ಮಾಡಿದರೆ ಮುಗಿದು ಹೋಯಿತು. Each District and Each Taluk ನೀವು population - wise divide ಮಾಡುತ್ತೀರಾ ?

ಶ್ರೀ ಟಿ.ಬಿ.ಜಯಚಂದ್ರ : ಸಂವಿಧಾನ ಏಕೆ ಬದಲಾವಣೆ ಆಗಿದೆ ಎನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಸಿ.ಟಿ.ರವಿ : ಅರ್ಥ ಮಾಡಿಕೊಂಡೇ ಕೇಳುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ : ಆ ಭಾಗದಲ್ಲಿ Spcial attention ಕೊಡಬೇಕು ಎನ್ನುವ ಕಾರಣಕ್ಕೋಸ್ಕರ ಸಂವಿಧಾನ ಬದಲಾವಣೆ ಆಗಿದೆ. ಆ ಭಾಗದ ಜನ 20–30 ವರ್ಷಗಳಿಂದ fight ಮಾಡಿ ತಂದಿರತಕ್ಕಂಥದ್ದು.

ಶ್ರೀ ಸಿ.ಟಿ.ರವಿ: ನಮ್ಮ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತಿಲ್ಲವಲ್ಲ Fight ಮಾಡಿದ್ದು ವ್ಯರ್ಥವಾಗಬಾರದು. ನಮ್ಮ ಕಳಕಳಿ ಆರ್ಥ ಮಾಡಿಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆಡಳಿತ ಪಕ್ಷದವರಿಗೆ ಒಂದು ರೀತಿ, ವಿರೋಧ ಪಕ್ಷದವರಿಗೆ ಒಂದು ರೀತಿ ಆಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ :– ಅನವಶ್ಯಕವಾದ ಟೀಕೆಗಳನ್ನು ಮಾಡುತ್ತಿದ್ದೀರಿ. ಆಡಳಿತ ಅಥವಾ ವಿರೋಧ ಪಕ್ಷ ಎನ್ನತಕ್ಕಂಥದ್ದು ಇಲ್ಲಿ ಇಲ್ಲ.

ಶ್ರೀ ಸಿ.ಟಿ.ರವಿ:– ಮಾನ್ಯ ಅಭಯಚಂದ್ರರವರೇ, ನಾವು ಐದು ವರ್ಷ ಮಾತ್ರ ಇದ್ದುದು, ನೀವು 65 ವರ್ಷ ತೆಗೆದುಕೊಂಡಿರಲ್ಲ, ಇಷ್ಟು ವರ್ಷ ಏಕೆ ತೆಗೆದುಕೊಂಡಿರಿ? ನಿಮ್ಮ ಕೈಯಲ್ಲೇ ಅಧಿಕಾರ ಇತ್ತಲ್ಲ.

ಅಧ್ಯಕ್ಷರು : ಮಾನ್ಯ ರವಿ ಅವರೇ ಮಾನ್ಯ ಸಚಿವರು ಉತ್ತರ ಹೇಳಲಿ, ನೀವು ನಿಮ್ಮ ಅಭಿಪ್ರಾಯ ಹೇಳಿದ್ದೀರಿ, ಅವರು ಏನು ಹೇಳುತ್ತಾರೆ ಹೇಳಲಿ..

(ಗೊಂದಲ)

ಅಧ್ಯಕ್ಷರು : ಮಾನ್ಯ ಶಿವರಾಜ್ ತಂಗಡಗಿಯವರೇ, ಇದು ಚರ್ಚೆಯಲ್ಲ. ನೀವು ನೀವೇ ಎದ್ದು ಮಾತನಾಡಿದರೆ ಹೇಗೆ?

ಶ್ರೀ ಬಿ ರಮಾನಾಥ ರೈ : ಆ ಕಾಲದಲ್ಲಿ ನೀವು ಮಾಡಿದ್ದು..

ಶ್ರೀ ಕೆ.ಜಿ.ಬೋಪಯ್ಯ :– ವಾಜಪೇಯಿ ಇದ್ದರು ಎಂದು ಹೇಳಿ,ಎಂದು ಎಂದು ಹೇಳುತ್ತಿದ್ದಾರೆ. ಒಬ್ಬ ಸಚಿವರಾಗಿ ಗೌರವದಿಂದ ಮಾತನಾಡಿ,

ಶ್ರೀ ಸಿ.ಟಿ.ರವಿ : ಅದು ಅವರ ಯೋಗ್ಯತೆ ತೋರಿಸುತ್ತದೆ ಬಿಡಿ, ನಾಲಿಗೆ ಕುಲ ಹೇಳುತ್ತದೆ ಎಂದು ಗಾದೆ ಮಾತಿದೆ.

ಶ್ರೀ ಕೆ.ಜಿ. ಬೋಪಯ್ಯ : ಇಡೀ ಪ್ರಪಂಚದಲ್ಲಿ ಗೌರವ ಕೊಡುತ್ತಾರೆ. ಇವರು ಏಕವಚನದಲ್ಲಿ ಮಾತನಾಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಚರ್ಚೆ ಎಲ್ಲೂ ಹೋಗುತ್ತಿದೆ. ದಯವಿಟ್ಟು ...

(ಗೊಂದಲ)

ಶ್ರೀ ರಮಾನಾಥ ರೈ: ದೇಶಕ್ಕಾಗಿ ಜೈಲಿಗೆ ಹೋದರು. ಪ್ರಧಾನ ಮಂತ್ರಿ ಗಳಾಗಬೇಕೆಂದು ಅಲ್ಲ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ನಾವು. ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ ಇದು ಚರ್ಚೆಯೇ? ದಯವಿಟ್ಟು ಕುಳಿತುಕೊಳ್ಳಿ, ಇದು ಚರ್ಚೆಯಲ್ಲ, please resume.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ವಾಜಪೇಯಿಯವರ ಬಗ್ಗೆ ಲಘುವಾಗಿ ಏಕವಚನದಲ್ಲಿ ಮಾತನಾಡಿದ್ದಾರೆ, ಅದನ್ನು ಕಡತದಿಂದ ತೆಗೆದು ಹಾಕಿ

ಅಧ್ಯಕ್ಷರು : ಅದೇನಿದೆ, ಅದನ್ನು ಕಡತದಿಂದ ತೆಗೆದು ಹಾಕಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಬೋರ್ಡ್ ಇವೇನು existing Board ಇರಲಿ ಎಂದು ಎಂದು ಹೇಳಿದಿರಿ, ಸಂತೋಷ. ನಮ್ಮ ಏರಿಯಾದ ಅಭಿವೃದ್ಧಿಗಾಗಿ ನೀವು ಹೇಳಬಹುದು. ಆದರೆ ಕಾನೂನು ಪ್ರಕಾರ ಇಡುವುದಕ್ಕೆ ಬರುವುದಿಲ್ಲ. ಏಕೆ ಇಡುವುದಕ್ಕೆ ಬರುವುದಿಲ್ಲವೆಂದರೆ, Article 371 ತಿದ್ದುಪಡಿ ಆಗಿ ಆ ಬೋರ್ಡ್‌ನ್ನು ರಾಜ್ಯಪಾಲರ ನೇತೃತ್ವದಲ್ಲಿ ಮಾಡಬೇಕೆಂದು ಹೇಳಿ ಸಂವಿಧಾನ ತಿದ್ದುಪಡಿ ಆದಂತಹ ಸಂದರ್ಭದಲ್ಲಿ ಇನ್ನೊಂದು ಬೋರ್ಡ್ ಏನಿದೆ, ಅದು dissolve ಆಗಲೇಬೇಕು. repeal ಮಾಡಲೇಬೇಕು. ಅದಕ್ಕೆ meaning ಇಲ್ಲ. ಅದಕ್ಕಾಗಿ ನಮ್ಮ ಹಿರಿಯ ಸದಸ್ಯರು ಸಹಮತಿ ಆಗಬೇಕೆನ್ನುವುದು ಇದೆ. ಅದನ್ನು repeal ಮಾಡಬೇಕೆನ್ನುವುದು ಸರಿ ಇದೆ.

ಅಧ್ಯಕ್ಷರು : ಅದಕ್ಕಲ್ಲ, ಸಂಶಯ ವ್ಯಕ್ತಪಡಿಸಿದ್ದು ಕೇಳಿಸಿಕೊಳ್ಳಿ, ಹಿಂದಿನ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿ ಇತ್ತಲ್ಲ, ಅದಕ್ಕೆ ಬಂದಂತಹ ಹಣವನ್ನು ಎಲ್ಲರಿಗೂ ಸಮಾನವಾಗಿ ಎಲ್ಲರಿಗೂ ಹಂಚುತ್ತಿದ್ದರು. ಈ ವ್ಯವಸ್ಥೆ ಇರುತ್ತದೆಯೇ ಇಲ್ಲವೇ ಎಂದು ಕೇಳುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : MLA ವಾರು fund ಕೊಡಬಾರದು.

ಶ್ರೀ ಉಮೇಶ್ ವಿ ಕತ್ತಿ: ಮಾನ್ಯ ರಾಯರೆಡ್ಡಿಯವರು ಪೂರ್ಣ ಅರ್ಥ ಮಾಡಿಕೊಂಡು ಮಾತನಾಡಿ, 371 (j) implement ಆಗಲಿ, ನಾವು ಸ್ವಾಗತ ಮಾಡುತ್ತೇವೆ. ಅದು implement ಆಗಲಿ, ಅದರ ಕೆಳಗಡೆ ಒಂದು ಬೋರ್ಡ್ ಹೊಸದಾಗಿ ಮಾಡಬೇಕು ಅದನ್ನು ಮಾಡಿ. ಆದರೆ ಇರುವ ಬೋರ್ಡ್ ಅನ್ನು ಇದರಲ್ಲಿ ಮರ್ಜ್ ಮಾಡುವುದಕ್ಕೆ ಹೊರಟಿದ್ದಾರೆ. ಅದನ್ನು ಮಾಡಬೇಡಿ, ಆ ಭಾಗದ ಚುನಾಯಿತ ಜನಪ್ರತಿನಿಧಿಗಳು ಈ ಬೋರ್ಡಿನ ಸದಸ್ಯರಾಗಿದ್ದಾರೆ. ಅವರದೇ ಆದ ವಿಶೇಷ ಅನುದಾನ ಅವರಿಗೆ ಬರುತ್ತದೆ. ಜೊತೆಗೆ ರಾಜ್ಯಪಾಲರ ಅಧೀನದಲ್ಲಿ ನಡೆಯುತ್ತಿರುವಂತಹ ಆ ಹೊಸ ಬೋರ್ಡ್ ಆದು ನಡೆಯುತ್ತಿರಲಿ, ಈ ಬೋರ್ಡ್ ಇದ್ದರೆ ಜನಪ್ರತಿನಿಧಿಗಳು ಮಾಡುವಂತಹ ಕೆಲಸಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇವೆ ಆ ಬೋರ್ಡ್ ಮೇಲೆ ತಾವು ಪ್ರಹಾರ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಉಮೇಶ್ ಕತ್ತಿಯವರೇ ಒಂದು ನಿಮಿಷ ಇರಿ. ಒಂದು ಕೆಲಸ ಮಾಡಿ ಇನ್ನು ಮೂರು ದಿವಸ ಇದೆ. ಆ ಪ್ರದೇಶದ ಶಾಸಕರನ್ನೆಲ್ಲಾ ಒಂದು ದಿವಸ ಕರೆಸಿ ..

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಆ ಭಾಗದ ಎಲ್ಲಾ ಶಾಸಕರ ಜೊತೆ ಮೀಟಿಂಗ್ ಆಗಿದೆ. ಆ ಭಾಗದ ಐದು ಜಿಲ್ಲೆಯ ಶಾಸಕರ ಜೊತೆ ಕಳೆದ ಮೂರು ದಿವಸಗಳಿಂದ Consultation ನಡೆಯುತ್ತಿದೆ. ಅವರು ಕೊಟ್ಟ ಅಭಿಪ್ರಾಯದ ಆಧಾರದ ಮೇಲೆ ತಂದಿದ್ದೇವೆ.

ಅಧ್ಯಕ್ಷರು : ಆಯಿತು ಮೂವ್ ಮಾಡಿ, ಮಾನ್ಯ ಸಚಿವರೇ ಸ್ವಲ್ಪ ಕೇಳಿ, ಮಾನ್ಯ ಸದಸ್ಯರುಗಳು ಏನು ಸಂಶಯವನ್ನು ವ್ಯಕ್ತಪಡಿಸಿದ್ದಾರೆ ಇದು ನಿಮ್ಮ ಗಮನದಲ್ಲಿರಲಿ, ಯಾವುದೇ discrimination ಗೆ ಅವಕಾಶ ಆಗದೆ ಮಾಡಿ. ಮಾಡುವುದು ಒಳ್ಳೆಯದಕ್ಕೋಸ್ಕರ ಒಳ್ಳೆಯದಾಗಬೇಕೇ ವಿನ: ಇರುವಂತಹ privileges ಅನ್ನು ಕಿತ್ತುಕೊಳ್ಳುವುದು ಆಗಬಾರದು.

ಶ್ರೀ ಬಿ.ಆರ್.ಪಾಟೀಲ್:– ಲೋಪದೋಷಗಳು ವ್ಯವಸ್ಥೆಯಲ್ಲಿ ಬಂದೇ ಬರುತ್ತವೆ. ಅನುಭವದ ಆಧಾರದ ಮೇಲೆ ತಿದ್ದುಪಡಿ ಮಾಡಿಕೊಂಡು ಹೋಗೋಣ.

ಶ್ರೀ ಟಿ.ಬಿ.ಜಯಚಂದ್ರ : ಪ್ರತಿ ವರ್ಷ ಅನುದಾನ ಹೆಚ್ಚು ಕಡಿಮೆ ಬಂದೇ ಬರುತ್ತದೆ. ಆಗ ಅನೇಕ ರೀತಿಯ ಸಲಹೆಗಳನ್ನು ಕೊಡಬಹುದು

ಶ್ರೀ ಬಿ.ಆರ್.ಪಾಟೀಲ್ : ಶಾಸಕರ ಹಕ್ಕು ಬಾಧ್ಯತೆಗೆ ಧಕ್ಕೆ ಬರಬಾರದು.

ಶ್ರೀ ಟಿ.ಬಿ.ಜಯಚಂದ್ರ :– ಅದು ಯಾವುದೇ ರೀತಿಯಲ್ಲಿ ಇಲ್ಲ. ಅವರ ಕೈಯಲ್ಲಿ ಹೆಚ್ಚಿನ ಅಧಿಕಾರ ಇದೆ. ಆ ಭಾಗ ಅಭಿವೃದ್ಧಿ ಕಾಣುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ಸ್ವಲ್ಪ, ಇರಿ ನಮ್ಮ ಯುವ ಸದಸ್ಯ ಸ್ನೇಹಿತರು ಏನೋ ಹೇಳುತ್ತಾರಂತೆ, ಸ್ವಲ್ಪ ಇರಿ.

ಶ್ರೀ ಭೀಮಾ ನಾಯಕ್ :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಆ ಭಾಗದ ಎಲ್ಲಾ ಶಾಸಕರನ್ನು ಕರೆಸಿಕೊಂಡು ಚರ್ಚೆ ಮಾಡಿದ್ದಾರೆ. ಆದುದರಿಂದ ದಯಮಾಡಿ ಆ ಬಿಲ್‌ಅನ್ನು ಪಾಸ್ ಮಾಡಿ.

ಅಧ್ಯಕ್ಷರು :– ಆಯಿತು. Discussion is over , ಮಂತ್ರಿಯವರೇ move ಮಾಡಿ.

ಶ್ರೀ ಬಿ.ಆರ್.ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಹೈದರಾಬಾದ್ ಎನ್ನುವ ಪದವನ್ನು ತೆಗೆದು ಹಾಕಬೇಕೆಂದು ವಿನಂತಿ ಮಾಡುತ್ತೇನೆ. ಕಲ್ಯಾಣ ಕರ್ನಾಟಕ ಎನ್ನುವ ಪದವನ್ನು ಹಾಕಬೇಕು.

ಶ್ರೀ ಟಿ.ಬಿ.ಜಯಚಂದ್ರ : – ನೀವು ಸಲಹೆ ಕೊಟ್ಟಿದ್ದೀರಿ. ಮುಂದೆ ಅದರ ಬಗ್ಗೆ ಪರಿಶೀಲನೆ ಮಾಡಿ ಮಾಡಬಹುದು.

ಅಧ್ಯಕ್ಷರು :– ಮಾನ್ಯ ಮಂತ್ರಿಗಳೇ Discussion is over,

ಶ್ರೀ ಬಿ.ಆರ್.ಪಾಟೀಲ್ :– ದಿವಾನಿ ಎನ್ನುವ ಪದ ಬರಬಾರದು.

ಅಧ್ಯಕ್ಷರು:– ದಿವಾನಿ ಎನ್ನುವ ಪದವನ್ನು ಎಲ್ಲಿ ಉಪಯೋಗ ಮಾಡಿದ್ದಾರೋ ನನಗೆ ಗೊತ್ತಿಲ್ಲ.

ಶ್ರೀ ಬಿ.ಆರ್.ಪಾಟೀಲ್ :–ಕಲ್ಯಾಣ ಕರ್ನಾಟಕ ಎನ್ನುವ ಪದವನ್ನು ಹಾಕಬೇಕು. ಇಲ್ಲದಿದ್ದರೆ ನಾನು ಸದನದ ಬಾವಿಯಲ್ಲಿ ಧರಣಿ ಕೊರುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಬಿ.ಆರ್.ಪಾಟೀಲ್‌ರವರು ಸದನದ ಬಾವಿಗೆ ಬಂದು ಧರಣಿ ನಿರತರಾದರು.

ಅಧ್ಯಕ್ಷರು :– ಈಗಾಗಲೇ ಚರ್ಚೆ ಮುಗಿದಿದೆ. ಈಗ ನಾನು 2014 ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕದ ಪರ್ಯಾಲೋಚನಾ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

2014 ರ ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಆರ್.ಪಾಟೀಲ್‌ರವರು ಸದನದ ಬಾವಿಯಿಂದಲೇ ಮಾತನಾಡುತ್ತಿದ್ದದ್ದನ್ನು ದಾಖಲಿಸಿರುವುದಿಲ್ಲ)

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಅಧ್ಯಕ್ಷರು :– ಖಂಡ 2 ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

ಖಂಡ 2 ಖಂಡ ವಿಧೇಯಕದ ಅಂಗವಾಯಿತು

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು

ಅಧ್ಯಕ್ಷರು : – ರೀ, ಲೋಕಸಭೆಯಲ್ಲಿ 371(ಜೆ) ಗೆ ತಿದ್ದುಪಡಿ ತರುವಾಗ ಅಲ್ಲಿ ಏನೆಂದು ಹೇಳಲಾಗಿದೆಯೋ ಅದನ್ನು ನೀವು ನೋಡಬೇಕು.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಸಂವಿಧಾನದಲ್ಲಿ ಬದಲಾವಣೆ ಯಾಗಬೇಕಾದಾಗಲೇ ಸಂಸತ್ತಿನಲ್ಲಿ ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಎಂದೇ ಇದೆ. ಮಾನ್ಯ ಬಿ.ಆರ್. ಪಾಟೀಲ್‌ರವರು ಹೇಳಿದ ಹಾಗೆ ಮತ್ತೆ ಬದಲಾವಣೆ ಮಾಡಬೇಕೆಂದರೆ ಮತ್ತೆ ಲೋಕಸಭೆಗೆ ಹೋಗಬೇಕಾಗುತ್ತದೆ. ಆ ಕಾರಣಕ್ಕೋಸ್ಕರವೇ ನಾನು

ಯಾವುದಕ್ಕೂ ಕಮಿಟ್ ಆಗುತ್ತಿಲ್ಲ. ಆದರೆ ಬಿ.ಆರ್.ಪಾಟೀಲ್‌ರವರೆ, ನೀವು ಕೊಟ್ಟಿರುವ ಸಲಹೆ ಒಳ್ಳೆಯದಿದೆ. ಆ ಸಂದರ್ಭ ಬಂದಾಗ ಇದರ ಬಗ್ಗೆ ನೋಡೋಣ.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ : – ಮಾನ್ಯ ಅಧ್ಯಕ್ಷರೆ,,,,

ಅಧ್ಯಕ್ಷರು : ರಿ, ಕಾಗೇರಿಯವರೆ, ನಿಮಗೂ ಯಾಕ್ರಿ? ಮಾನ್ಯ ಪಾಟೀಲ್‌ರವರೆ, ಮಹಾನ್ ಘಟಾನುಘಟಿಗಳು ಕುಳಿತುಕೊಂಡು ಇದನ್ನು ಮಾಡಿದ್ದಾರೆ. ಆದುದರಿಂದ ನಿಮ್ಮ ಧರಣಿಯನ್ನು ವಾಪಸ್ ತೆಗೆದುಕೊಳ್ಳಿ,

(ಈ ಹಂತದಲ್ಲಿ ಧರಣಿ ನಿರತರಾಗಿದ್ದ ಶ್ರೀ ಬಿ.ಆರ್.ಪಾಟೀಲ್‌ರವರು ಸದನದ ಬಾವಿಯಿಂದ ನಿರ್ಗಮಿಸಿ ತಮ್ಮ ಸ್ವಸ್ಥಾನಕ್ಕೆ ಹೋದರು)

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಪಾಟೀಲ್‌ರವರೆ, ನಿಮ್ಮ ಸಲಹೆ ಒಳ್ಳೆಯದಿದೆಯೆಂದು ಹೇಳಿದ್ದೇನೆ.

ಅಧ್ಯಕ್ಷರು :– ಈಗ ಚರ್ಚೆ ಸಾಕು.

ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು :– ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದೆ ಇರುವ ವಿಷಯ"

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ

(ಪ್ರಥಮ ಖಂಡ ಹೆಸರು ಮತ್ತು ಆವತರಣಿಕೆಗಳು ವಿಧೇಯಕದ ಅಂಗವಾದವು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ ಹೆಸರು ಮತ್ತು ಅವಕರಣಿಕೆಯನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಟಿ.ಬಿ.ಜಯಚಂದ್ರ(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)ಶ್ರೀ ಎಸ್,ಆರ್,ಪಾಟೀಲ್(ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, 2014 ರ ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು :– ಪ್ರಸ್ತಾವವನ್ನು ಮಂಡಿಸಲಾಗಿದೆ. ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪಸ್ತಾವವು ಹೀಗಿದೆ, 2014 ರ ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ವಿಧೇಯಕಕ್ಕೆ ಅನುಮೋದನೆ ದೊರೆಯಿತು

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ,2014

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಸತೀಶ್ ಜಾರಕಿಹೊಳಿ, ಅಬಕಾರಿ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, 2014 ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು :– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. 2014ನೇ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ'

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು"ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

(ಪ್ರಸ್ತಾವ ಮಂಡಿಸಲಾಯಿತು)